ಮಾನಸಿ

ತಿಂಗಳ ಪತ್ರಿಕೆ

ಜನವರಿ 1994

- ★ ಮಾನಸದ ಅವಲೋಕನ
- ★ ಯುವತಿಯರಿಗೆ ಸ್ವ-ಉದ್ಯೋಗ
- ★ ಪುರುಷ ಪ್ರಧಾನತೆಗೆ ಮಹಿಳೆಯರೆಷ್ಟು ಕಾರಣ
- ★ ಮರಳಿ ಬಾರದ ಗೆಳತಿಗೆ
- ★ ನನ್ನದೇ ಕೊಠಡಿ
- ★ ಹೆಜ್ಜೆಗಳು

ಮಾನಸ

ತಿಂಗಳ ಪತ್ರಿಕೆ

ಸಂಪುಟ : ೯ ಸಂಚಿಕೆ : ೧

ಜನವರಿ-೧೯೯೪

ಸಂಪಾದಕೀಯ ಮಂಡಳಿ :

ರಾಜೇಶ್ವರಿ ಎಚ್. ಎಸ್.,
ಚಂಪಾವತಿ ಎಚ್. ಎಸ್., ಸರಸ್ವತಿ ದು.,
ಸವಿತ ಎ., ಗಾಯತ್ರಿ ವಿ.

ಸಲಹೆ-ಸಹಕಾರ

ಇಳಾ ವಿಜಯಾ

ವಿಳಾಸ :

"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು–560 067

ಸಂಪರ್ಕ ವಿಳಾಸ
ನಂ–457, 12ನೇ ಅಡ್ಡರಸ್ತೆ,
ಪಶ್ಚಿಮ ಕಾರ್ಡ್‌ರಸ್ತೆ, 2ನೇ ಹಂತ
ಮಹಾಲಕ್ಷ್ಮಿಪುರ, ಬೆಂಗಳೂರು-560 086

ಸೂಚನೆ : ಬಿಡಿ ಪ್ರತಿ : **3. 00 ರೂ.**
ವಾರ್ಷಿಕ ಚಂದಾ : **25 ರೂ.**
ಆಜೀವ ಚಂದಾ : **300 ರೂ.**

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.

ಈ ಸಂಚಿಕೆಯಲ್ಲಿ...

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು-೫೬೦ ೦೬೭



ಸಂಪಾದಕೀಯ

ಇತ್ತೀಚೆಗೆ ಸರ್ವೋನ್ನತ ನ್ಯಾಯಾಲಯ ಅತ್ಯಾಚಾರದ ಸಂಬಂಧ ಪಟ್ಟಂತೆ ನೀಡಿದ ತೀರ್ಪು ಮಹಿಳಾ ಸಂಘಟನೆಗಳಿಗೆ ಹಾಗೂ ಪ್ರಜ್ಞಾವಂತ ನಾಗರೀಕರಿಗೆ ದಿಗ್ಭ್ರಮೆಯನ್ನು ಉಂಟುಮಾಡಿದೆ. ಈ ತೀರ್ಪು ಸಮಾಜದಲ್ಲಿ ಸ್ತ್ರೀಯರ ಬಗೆಗಿರುವ 'ಎರಡನೇ ದರ್ಜೆಯ' ಮೌಲ್ಯಗಳನ್ನು ಬಲಪಡಿಸುತ್ತಿದೆ.

1978 ರಲ್ಲಿ ಹಾಸನದಲ್ಲಿ ಮಹಿಳೆಯೋರ್ವಳ ಮೇಲೆ ನಡೆದ ಅತ್ಯಾಚಾರದ ಘಟನೆಯಲ್ಲಿ ಹೈಕೋರ್ಟ್ ಆರೋಪಿಗಳಿಗೆ ನೀಡಿದ 7 ವರ್ಷದ ಶಿಕ್ಷೆಯನ್ನು ಮೂರು ವರ್ಷಕ್ಕಿಳಿಸುವುದರ ಜೊತೆಗೆ ಅದಕ್ಕೆ ಪೂರಕವಾಗಿ ನೀಡಲಾದ ಟಿಪ್ಪಣಿಗಳು, ಜಡ್ಡುಗಟ್ಟಿದ, ಮಹಿಳಾ ವಿರೋಧಿಯಾಗಿರುವ ಅತ್ಯಾಚಾರದ ಕಾನೂನಿನಲ್ಲಿರುವ ಮಿತಿಗಳ ಸಮರ್ಥನೆಯಾಗಿದೆ. ಸ್ತ್ರೀಯರ ಉಡುಗೆ–ತೊಡುಗೆ ಆಕೆಯ ಹಿಂದಿನ ಚಾರಿತ್ರ್ಯ, ಸ್ತ್ರೀಯನ್ನು ನೋಡಿದ ಕೂಡಲೇ ಪುರುಷನು ಉದ್ರೇಕಗೊಳ್ಳುವುದು ಪುರುಷತ್ವದ ನೈಜತೆಯೆಂಬ ಹಲವಾರು ಪಿತೃಪ್ರಧಾನ ಸಂಸ್ಕೃತಿಯ ರಾಜಕೀಯ ಹುನ್ನಾರಗಳು ಈ ತೀರ್ಪಿನಲ್ಲಿ ಅಡಕವಾಗಿವೆ.

ಅತ್ಯಾಚಾರಕ್ಕೊಳಗಾದ ಮಹಿಳೆಯೋರ್ವಳು ನ್ಯಾಯಾಲಯದಲ್ಲಿ ನ್ಯಾಯಕೇಳುವುದೆಂದರೆ, ಆಕೆಯೇ ಶಿಕ್ಷೆಯನ್ನು ಅನುಭವಿಸುವಂತೆ ಮಾಡುವ ಸಾಮಾಜಿಕ ಸನ್ನಿವೇಶ ನಮ್ಮದು. ಆರೋಪಿಯ ಬದಲಾಗಿ ನೊಂದ ಹೆಣ್ಣೆ ತನ್ನ ಮೇಲೆ ನಡೆದ ಹಿಂಸೆಯನ್ನು ಸಾಬೀತು ಗೊಳಿಸಬೇಕಾದ ಅನಿವಾರ್ಯತೆ ಶಿಕ್ಷೆಯ ಒಂದು ಮುಖವಾದರೆ, ಸ್ತ್ರೀಯೇ ಅದಕ್ಕೆ ಕಾರಣವೆನ್ನುವುದು ಇನ್ನೊಂದು ಮುಖ. ಅತ್ಯಾಚಾರದ ಕಾನೂನಿನಲ್ಲಿ ಬದಲಾವಣೆಯನ್ನು ಬಯಸಿ ಹಲವಾರು ಮಹಿಳಾ ವೇದಿಕೆಗಳು ಹೋರಾಟ ನಡೆಸುತ್ತಿರುವ ಸಂದರ್ಭದಲ್ಲಿಯೇ ನ್ಯಾಯಾಲಯ ನೀಡಿದ ಈ ತೀರ್ಪು ನಮ್ಮ ವ್ಯವಸ್ಥೆಯಲ್ಲಿ ಬಲವಾಗಿ ಬೇರೂರಿರುವ ಪಿತೃಪ್ರಧಾನ ವ್ಯವಸ್ಥೆಯ ಪ್ರಾತಿನಿಧಿಕ ಸಂಕೇತ ವೆನ್ನಬಹುದು.

1993ನೆಯ ವರ್ಷದ 'ಮಾನಸ ಪತ್ರಿಕೆಯ' ಒಂದು ಅವಲೋಕನ

ಸಂಪಾದಕೀಯ ಮಂಡಳಿ

1993ನೆಯ ವರ್ಷದಿಂದ 1994ರ ಹೊಸ ವರ್ಷಕ್ಕೆ ಕಾಲಿಡುವ ಸಂದರ್ಭದಲ್ಲಿ 'ಮಾನಸ ತಿಂಗಳ ಪತ್ರಿಕೆ' ಯ ಏಳು-ಬೀಳುಗಳ ಕುರಿತು ಸಂಪಾದಕೀಯ ಮಂಡಳಿಯಲ್ಲಿ ನಡೆದ ಚರ್ಚೆಯಲ್ಲಿ ಹೊರ ಬಂದ ಕೆಲವು ಅಂಶಗಳು ಸ್ತ್ರೀವಾದಿ ಚಳುವಳಿ ಹಾಗೂ ಸ್ತ್ರೀವಾದದ ಒಟ್ಟು ಬೆಳವಣಿಗೆಗೆ ಸಹಾಯಕವಾಗಬಹುದೆಂಬ ಆಶಯದಿಂದ ಚರ್ಚೆಯ ಮುಖ್ಯ ಅಂಶಗಳನ್ನು ಓದುಗರೊಂದಿಗೆ ಹಂಚಿಕೊಳ್ಳುತ್ತಿದ್ದೇವೆ. ಚರ್ಚೆ ಮುಖ್ಯವಾಗಿ 93ರ ವರ್ಷದಲ್ಲಿನ 'ಮಾನಸ'ದ ವೈಫಲ್ಯ। ಸಾಫಲ್ಯಗಳ ಮೇಲೆ ಬೆಳಕು ಚೆಲ್ಲಿ ಅವಲೋಕಿಸುವುದಾಗಿತ್ತು.

ಚರ್ಚೆಯಲ್ಲಿ ಮೂಡಿ ಬಂದ ಮುಖ್ಯ ಅಂಶಗಳು—

1. ಮಾನಸ, ಸಂಪಾದಕ ಮಂಡಳಿಯ ಕಲೆಕ್ಟೀವ್ ಜವಾಬ್ದಾರಿ ಹಾಗೂ ಕಲೆಕ್ಟೀವ್ ನಿರ್ಧಾರಗಳು.
2. 'ಮಾನಸ'ದ ಹಣ ಸಂಗ್ರಹಣೆಯ ಹಿಂದಿರುವ ರಾಜಕೀಯ ದೃಷ್ಟಿಕೋನ.
3. 'ಮಾನಸ' ದಲ್ಲಿ ಪ್ರಕಟವಾಗಿರುವ ಲೇಖನಗಳ ಹಿಂದಿರುವ ತಾತ್ವಿಕತೆ, 'ಮಾನಸ' ಪತ್ರಿಕೆಯ ವೈಚಾರಿಕ ನಿಲುವು, ವೈಚಾರಿಕತೆಯ ಪ್ರಬಲವಾಗಿ ರೂಪಿಸುವಲ್ಲಿ 'ಮಾನಸ'–ಗಮನ ವಹಿಸಿ ಪ್ರಕಟಿಸಬೇಕಾದ ಸಮಸ್ಯೆಗಳು, ಲೇಖನಗಳು.
4. ಭಾರತದ ಮಹಿಳಾ ಚಳುವಳಿಯಲ್ಲಿ 'ಮಾನಸ' ದಂತಹ ಪತ್ರಿಕೆಯ ಪಾತ್ರ.

1. 'ಮಾನಸ' ಸಂಪಾದಕ ಮಂಡಳಿಯ ಕಲೆಕ್ಟೀವ್ ಜವಾಬ್ದಾರಿ ಹಾಗೂ ಕಲೆಕ್ಟೀವ್ ನಿರ್ಧಾರಗಳು.

ಸ್ತ್ರೀವಾದಿ ಚಳುವಳಿಯ ಮುಖ್ಯವಾದ ತತ್ವಗಳೆಂದರೆ ಸಮಾನವಾಗಿ ಜವಾಬ್ದಾರಿ ಹಂಚಿಕೊಳ್ಳುವುದು ಹಾಗೂ ಒಟ್ಟಿಗೇ ನಿರ್ಧಾರಗಳನ್ನು ತೆಗೆದುಕೊಳ್ಳುವುದು. ಶ್ರೇಣೀಕೃತ ವ್ಯವಸ್ಥೆಯ ವಿರೋಧಿಸಿ ಕೆಲಸ ಮಾಡುವುದೂ ಕೂಡಾ ಮುಖ್ಯವಾದುದು. ಸ್ತ್ರೀವಾದಿ ಚಳುವಳಿ ಪ್ರಾಥಮಿಕ ಹಂತಗಳಿಂದಲೂ ಈ ವಿಚಾರಗಳಿಗೆ ಸಾಕಷ್ಟು ಪ್ರಾಮುಖ್ಯತೆಯನ್ನು ನೀಡಿದೆ. ಶ್ರೇಣೀಕೃತ ವ್ಯವಸ್ಥೆಯ ವಿರೋಧಿಸಿ ಕೆಲಸ ಮಾಡಬೇಕೆಂದು ಮಹಿಳೆಯರು ಬದುಕಿನಿಂದ ಕಲಿತ ಪಾಠ. ರಾಜಕೀಯ ಪಕ್ಷಗಳ ರಚನೆಯ ತರಹ ಒಬ್ಬ ವ್ಯಕ್ತಿಯ ಅಥವಾ ಹಲವೇ ವ್ಯಕ್ತಿಗಳ ಅಧಿಕಾರ ಶಾಹಿತ್ವದ ಕೆಳಗೆ, ಅವರ ನಿರ್ಧಾರಗಳ ಕೆಳಗೆ ನೂರಾರು ಜನ ಕಾರ್ಯಕರ್ತರು,/ಕಾರ್ಯಕರ್ತೆಯರು ಕೆಲಸ ಮಾಡುವಂತಿರಬಾರದು. ಸಂಘಟನೆಗಳಲ್ಲಿ. ಚಳವಳಿಯಲ್ಲಿ ಭಾಗವಹಿಸುವ ಪ್ರತಿಯೊಬ್ಬ ಮಹಿಳೆಯೂ ಆ ಹಂತದ ಜವಾಬ್ದಾರಿ ಹಂಚಿಕೊಳ್ಳುವ ಜೊತೆಗೆ ಪ್ರತಿಯೊಂದು ನಿರ್ಧಾರದ ಹಂತದಲ್ಲೂ ಸಮನಾಗಿ ಭಾಗವಹಿಸಬೇಕು.

ಶ್ರೇಣೀಕೃತ ವ್ಯವಸ್ಥೆಯೊಂದಿಗೆ ತಳಕು ಹಾಕಿಕೊಂಡಿರುವ ಇನ್ನೊಂದು ಪ್ರಚಲಿತ ಸಮಸ್ಯೆಯೆಂದರೆ ಕೆಲವು ನಿರ್ದಿಷ್ಟ ಕೆಲಸಗಳ ಹಿಂದಿರುವ ಕೀಳರಿಮೆ ಭಾವನೆ, ಕಣ್ಣಿಗೆ ರಾಚುವಂತಹ ವ್ಯತ್ಯಾಸಗಳ ಬಗ್ಗೆ ನಾವು ಧ್ವನಿ ಎತ್ತಿ ಮಾತನಾಡುತ್ತಿದ್ದರೂ, ವೈಯಕ್ತಿಕ ನೆಲೆಯಲ್ಲಿ ಕೆಲವು ಶ್ರಮಗಳ ಹಿಂದಿರುವ ಕೀಳರಿಮೆಯ ಧೋರಣೆಯನ್ನು ಕಿತ್ತು ಹಾಕಿ ಎಲ್ಲಾ ಕೆಲಸ ಸಮಾನ ದೃಷ್ಟಿಯಿಂದ ಮಾಡುವುದು ಅಷ್ಟು ಸರಳವೇನಲ್ಲ. ಈ ಪ್ರಕ್ರಿಯೆಯಲ್ಲಿ ನಮ್ಮನ್ನು ನಾವು ಪ್ರಜ್ಞಾಪೂರ್ವಕವಾಗಿ ತೊಡಗಿಸಿಕೊಳ್ಳಲು, ಇತರರನ್ನು ಈ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡುವ ಪ್ರಯತ್ನವನ್ನು ಸಂಪಾದಕ ಮಂಡಳಿ ಪ್ರಾಮಾಣಿಕವಾಗಿ ಯತ್ನಿಸಿದೆ. ಸಂಪಾದಕೀಯ, ಲೇಖನ ಬರೆಯುಷ್ಟೇ ಮುಖ್ಯವಾದದ್ದು ಹಾಗೂ ಸಮನಾದದ್ದು — ಮುದ್ರಣ ಕಾರ್ಯ ಮುಗಿದ ಮೇಲೆ ವಿಳಾಸ ಬರೆಯುವುದು, ಅಂಚೆ ಚೀಟಿ ಹಚ್ಚುವುದು, ಅಂಚೆ ಕಛೇರಿಗೆ ರವಾನಿಸುವುದು. ಕೆಲವನ್ನು 'ಕೆಲವರೇ' — ಮಾಡಬೇಕು ಎಂಬ ಪ್ರಚಲಿತವಾಗಿರುವ, ನಮ್ಮ ಮನದೊಳಗೆಲ್ಲೋ ಗೋಡೆ ಕಟ್ಟಿಕೊಂಡಿರುವ ಧೋರಣೆಯನ್ನು ಕೆಡವಲು ನಾವು ಯತ್ನಿಸಿದ್ದೇವೆ. ಐತಿಹಾಸಿಕವಾಗಿ 'ಅಗೋಚರ' ವಾದ ಸ್ತ್ರೀ ಪ್ರಜ್ಞೆಯು ಸ್ತ್ರೀಯರ

ನಡುವೆಯೇ ಅಗೋಚರವಾಗುವುದರ ಬಗ್ಗೆಯೂ ನಾವು ಪ್ರಜ್ಞಾವಂತರಾಗಿರಲು ಪ್ರಯತ್ನಿಸಿದ್ದೇವೆ.

ಜವಾಬ್ದಾರಿ–ನಿರ್ಧಾರಗಳು ಇಲ್ಲಿ ಒಗ್ಗೂಡಿದ ಪ್ರಯತ್ನಗಳು. 'ಮಾನಸ ತಿಂಗಳ ಪತ್ರಿಕೆ'ಯು ಈ ಎರಡೂ ತತ್ವಗಳಿಗೆ ಬದ್ಧವಾಗಿರುವ ಪ್ರಯತ್ನವನ್ನೂ ಪ್ರಮಾಣಿಕವಾಗಿ ಮಾಡಿದೆ. 93ನೆಯ ವರ್ಷದಲ್ಲಿ ಸಂಪಾದಕ ಮಂಡಳಿಯ ಕೆಲವು ಸದಸ್ಯರು ಹೆಚ್ಚು ಜವಾಬ್ದಾರಿಯ ಹೊರೆಯಿಂದಾಗಿ ಒಟ್ಟು ಹಂತದ ಬಗ್ಗೆ ನಿರುತ್ಸಾಹ ತೋರಿಸಿದಾಗ, ಮತ್ತೆ ಸಂಪಾದಕೀಯ ಮಂಡಳಿಯ ಸದಸ್ಯರೆಲ್ಲರೂ ಒಟ್ಟಿಗೇ ಕುಳಿತು ಜವಾಬ್ದಾರಿಗಳನ್ನು ಹಂಚಿಕೊಳ್ಳುವ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿತ್ತು. ಪತ್ರಿಕೆಗೆ ತೊಡರು ಮುಖ್ಯವಾಗಿ ಬರುವುದೇ ಹಣ ಕಾಸಿನ ವಿಚಾರದಲ್ಲಿ. ಪತ್ರಿಕೆಗೆ ಪ್ರತಿ ತಿಂಗಳೂ ಬೇಕಾಗುವ ಸುಮಾರು 1700ರೂ ಹಣವನ್ನು ಸಂಗ್ರಹಿಸುವ ಹೊಣೆಯನ್ನು ಸಂಪಾದಕೀಯ ಮಂಡಳಿಯ ನಾಲ್ವರು ಸದಸ್ಯರೂ ಸಮನಾಗಿ ಹಂಚಿಕೊಳ್ಳುವುದೆಂದು ಒಂದು ಗಟ್ಟಿ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಪ್ರತಿಯೊಬ್ಬ ಸಧಸ್ಯರೂ 425ರೂಗಳವರೆಗೆ ಚಂದಾ/ ಅಜೀವ ಚಂದಾ/ಸಹಾಯಧನ ಎತ್ತಬೇಕು. ಹೀಗೆ ಸಂಗ್ರಹಿಸಲು ಸಾಧ್ಯವಾಗದಿದ್ದಲ್ಲಿ ವೈಯಕ್ತಿಕವಾಗಿಯಾದರೂ ಕೊಟ್ಟು ಬಿಡಬೇಕು ಎನ್ನುವ ನಿರ್ಧಾರವದು. ಹಣವನ್ನು ಎತ್ತಲು ಸಾಕಷ್ಟು ಪ್ರಯತ್ನ ಮಾಡಿದರೂ ಎಷ್ಟೋ ಸಮಯ ಎಲ್ಲರೂ ಕೈಯಿಂದ ಹಾಕಿದ್ದೇವೆ. ಸಂಘ–ಸಂಸ್ಥೆಗಳಿಂದ ಚಂದಾ ಎತ್ತುವುದು, ವೈಯಕ್ತಿಕ ಚಂದಾ, ಕೆಲವರಿಗೆ ಪತ್ರದ ಜೊತೆ ಹಳೆಯ ಸಂಚಿಕೆ ಕಳಿಸಿ ಚಂದಾ ಕೇಳುವುದು, ಆಗೊಮ್ಮೆ ಈಗೊಮ್ಮೆ ಸಿಗುವ ಜಾಹಿರಾತಿನಿಂದ ಹಣ ಸಂಗ್ರಹಿಸುವುದು, ಕೆಲವು ಸ್ನೇಹಿತೆ/ಸ್ನೇಹಿತರಿಂದ ಪ್ರತಿ ತಿಂಗಳು ಸಹಾಯ ಧನ ಪಡೆಯುವುದು-ಈ ರೀತಿಯಾಗಿ ಪತ್ರಿಕೆಗೆ ಹಣವನ್ನು ಸಂಗ್ರಹಿಸಿದ್ದೇವೆ. ಹಣ ಎತ್ತುವ ಕೆಲಸ ಎಷ್ಟು ಕಷ್ಟದ್ದೆಂದರೆ ಕೆಲವುಸಲ ಕೈಯಿಂದ ಹಾಕಿ ಸುಮ್ಮನಾಗಿ ಬಿಡುವುದು ಒಳಿತು ಎನಿಸಿದೆ. ಪತ್ರಿಕೆಯ ಹಣ ಸಂಗ್ರಹಣೆಯ ವಿಚಾರ ಅಷ್ಟು ಸುಲಭವಲ್ಲ ಎನ್ನುವುದು ಎಲ್ಲರಿಗೂ ತಿಳಿದ ವಿಚಾರ. ಏರುತ್ತಿರುವ ಬೆಲೆಗಳಲ್ಲಿ ಇಂಚು–ಇಂಚು ಹೊಂದಿಸಿಕೊಂಡು ಬದುಕಬೇಕಾದ ನಮ್ಮಂತಹ ಮಧ್ಯಮ ವರ್ಗದವರಿಗೆ ವೈಯಕ್ತಿಕವಾಗಿ ಸಹಾಯಧನ ಎಂದು ನೀಡುವುದೂ ಸುಲಭದ ಮಾತಲ್ಲ. ಆದರೆ ಸ್ತ್ರೀವಾದಿ ವಾತಾವರಣಕ್ಕೆ ಸಾಂಸ್ಕೃತಿಕ ಕೊಡುಗೆಯಾಗ ಬಯಸುವ 'ಮಾನಸ'ವನ್ನು ಉಳಿಸಬೇಕು, ಬೆಳೆಸಬೇಕು ಎನ್ನುವ ಬದ್ಧತೆಯಿಂದ 93ರಿಂದ94ರ ವರೆಗೆ ಮೇಲಿನ ನಿಯಮಕ್ಕೆ ಬದ್ಧವಾಗಿಯೇ ಸಂಪಾದಕೀಯ ಮಂಡಳಿಯ ನಾಲ್ವರು ಸದಸ್ಯರು ನಡೆದುಕೊಂಡಿದ್ದೇವೆ. ಹಣಕಾಸಿನ ಜವಾಬ್ದಾರಿಯ ಜೊತೆಗೆಯೇ ಸಂಚಿಕೆಗಳ ಜವಾಬ್ದಾರಿಯನ್ನು ಒಬ್ಬೊಬ್ಬರು ಹಂಚಿಕೊಂಡದ್ದಾಯಿತು. ಅಂದರೆ ವರ್ಷದಲ್ಲಿ ಮೂರು ಮೂರು ಸಂಚಿಕೆಗಳು ಒಬ್ಬೊಬರ ಜವಾಬ್ದಾರಿ. ಈ ರೀತಿಯ ಜವಾಬ್ದಾರಿಗಳಿಂದಾಗಿ ಪತ್ರಿಕೆಯ ಹಣಕಾಸಿನ ವಿಚಾರದಲ್ಲಾಗಲೀ, ಸಮಯಕ್ಕೆ ಸರಿಯಾಗಿ ಲೇಖನಗಳನ್ನು ಹೊಂದಿಸಿ ಪತ್ರಿಕೆಯನ್ನು ತರುವ ವಿಚಾರದಲ್ಲಾಗಲೀ ಅಷ್ಟೊಂದು ಎಡರು–ತೊಡರುಗಳನ್ನು 'ಮಾನಸ' 93ನೆಯ ವರ್ಷದಲ್ಲಿ ಎದುರಿಸಲಿಲ್ಲ. ಹಣಕಾಸಿನ ಜವಾಬ್ದಾರಿ, ಹಾಗೂ ಪತ್ರಿಕೆಯ ಲೇಖನದ ಜವಾಬ್ದಾರಿಗಳನ್ನು ನಾಲ್ವರು ಸದಸ್ಯರು ಸಮನಾಗಿ ಹಂಚಿಕೊಂಡಿದ್ದರಿಂದ 'ಮಾನಸ' ಪತ್ರಿಕೆ ಹೆಚ್ಚು ನಿಯತಕಾಲಿಕವಾಗಿ ಮೂಡಿಬರಲು ಸಾಧ್ಯವಾಯಿತು.

ಈ ಇಡಿಯ ಹಂತವನ್ನು ಅವಲೋಕಿಸುದಾಗ ಇಲ್ಲಿ ಅಡಕವಾಗಿರುವ ಋಣಾತ್ಮಕ ಅಂಶಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ಹೀಗೆ ಹಣ ಹೊಂದಿಸುವ ಲೇಖನ ಹೊಂದಿಸುವ ಜವಾಬ್ದಾರಿ ಅವರವರ ವೈಯಕ್ತಿಕ ಎಂದು ತೀರ್ಮಾನವಾಗಿಬಿಟ್ಟಾಗ ಎಲ್ಲರೂ ತಮ್ಮ ತಮ್ಮ ಮೊತ್ತದ ಬಗ್ಗೆ, ತಮ್ಮ ತಮ್ಮ ಸಂಚಿಕೆಗಳ ಬಗ್ಗೆ ಯೋಚಿಸುವುದು ಕಂಡು ಬಂದಿದೆ. ಸಂಪಾದಕೀಯ ಮಂಡಳಿಯ ಸದಸ್ಯರ ನಡುವೆಯೇ ಬಂಡವಾಳ ಶಾಹಿತ್ವ ಹುಟ್ಟು ಹಾಕುವ ಒಂದು ರೀತಿಯ 'ಸ್ಪರ್ಧೆ' ಉಂಟಾಗಿದೆ. ಹಾಗಾಗಿ ಸ್ತ್ರೀವಾದಿ ಚಳುವಳಿಯ ಮೂಲಭೂತ ತತ್ವಗಳೇ ಅಲುಗಾಡಿ ಹೋಗುತ್ತಿವೆ. ಈ ಸಂದರ್ಭದಲ್ಲಿ ಇನ್ನೊಬ್ಬರಿಗೆ ಹಣ ಎತ್ತಲಿಕ್ಕೆ ಆಗುತ್ತದೆಯೋ ಇಲ್ಲವೋ, ಅವರಿಗೆ ವೈಯಕ್ತಿಕ ಕಷ್ಟಗಳಿರಬಹುದೋ ಏನೋ, ಇನ್ನೊಬ್ಬರ ಸಂಚಿಕೆಗೆ ಲೇಖನ ಹೊಂದಿಸಲಾಯಿತೋ ಇಲ್ಲವೋ— ಇಂತಹ ಕಾಳಜಿಯ ತುಡಿತಗಳು ನಮ್ಮಲ್ಲಿ ಕಡಿಮೆಯಾಗಿಬಿಟ್ಟಿವೆ ಎಂಬ ಅಂಶದ ಮೇಲೆ ಹೆಚ್ಚು ಗಮನ ಕೊಟ್ಟು ಚರ್ಚಿಸಲಾಯಿತು. ಇಂತಹ

ಸ್ಪರ್ಧೆ ಅನಾರೋಗ್ಯಕರವಾದದ್ದು, ಹಾಗೂ 'ಕಲೆಕ್ಟೀವ್' ಎನ್ನುವ ಅಂಶವನ್ನೇ ಇದು ನುಂಗಿ ಹಾಕಿಬಿಡುತ್ತದೆ. ಹಾಗಾಗಿ ಈ ಬಗ್ಗೆ ನಾವು ಯೋಚಿಸಬೇಕು ಎಂದು ಸಂಪಾದಕೀಯ ಮಂಡಳಿಯ ಸದಸ್ಯರು ಅಭಿಪ್ರಾಯ ಪಟ್ಟರು. ವರ್ಷಕ್ಕೆ 'ಮಾನಸ' ಪತ್ರಿಕೆಯ ಒಟ್ಟು ವೆಚ್ಚದ ಮೊತ್ತ 20,400/ ರೂಗಳು. ಇಷ್ಟು ಮೊತ್ತದ ಹಣವನ್ನು ಸಂಗ್ರಹಿಸಲು ಒಟ್ಟಾಗಿ ಪ್ರಯತ್ನಿಸುವುದೂ ಅಗತ್ಯ ಎನ್ನುವ ವಿಚಾರ ಮೂಡಿ ಬಂತು. ಜೊತೆಗೆ ಪ್ರತಿಯೊಂದು ಸಂಚಿಕೆಯನ್ನು ಇನ್ನೊಬ್ಬರು ಗಮನಿಸುವ ಇನ್ನೊಬ್ಬರಿಗೆ ಸಹಾಯಿಸುವ ಪ್ರಯತ್ನಗಳೂ ಅತ್ಯಗತ್ಯ ವೆಂಬ ಧ್ವನಿಯೂ ಮೂಡಿ ಬಂತು. ಮಹಿಳಾ ಚಳವಳಿಯ ಮುಖ್ಯ ಆಶಯ 'ಕಲೆಕ್ಟೀವ್'. ಇದು ನಮ್ಮೆಲ್ಲರ ಬೆಳವಣಿಗೆಯ, ಪತ್ರಿಕೆಯ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲೂ ಧ್ವನಿಸಬೇಕೆಂಬುದು ಸಂಪಾದಕೀಯ ಮಂಡಳಿಯ ಎಲ್ಲರ ಅಭಿಪ್ರಾಯವಾಗಿತ್ತು.

2. 'ಮಾನಸ'ದ ಹಣ ಸಂಗ್ರಹಣೆಯ ಹಿಂದಿರುವ ರಾಜಕೀಯ ದೃಷ್ಟಿಕೋನ

1985ರಿಂದ 'ಮಾನಸ' ಪ್ರಾರಂಭವಾದಾಗಿನಿಂದಲೂ ಸರ್ಕಾರಿ, ವಿದೇಶೀ ಅಥವಾ ಇನ್ನಾವುದೇ ಏಜೆನ್ಸಿಯಿಂದ ಹಣದ ನೆರವನ್ನು ಪಡೆಯಬಾರದು ಎನ್ನುವ ನಿಲುವನ್ನೇ ಉಳಿಸಿಕೊಂಡು ಬಂದಿದೆ. ಚಳುವಳಿಯ ಭಾಗವಾಗಿರುವ ಪತ್ರಿಕೆ ಯಾರ ಹಂಗಿಗೂ ಒಳಗಾಗದೇ 'ಸ್ವಾಯತ್ತತೆ' ಉಳಿಸಿಕೊಳ್ಳಬೇಕು ಎನ್ನುವ ಅಪೇಕ್ಷೆ ಒಂದು ಕಡೆಯಾದರೆ, 'ಮಾನಸ'ಕ್ಕಾಗಿ ಎತ್ತುವ ಹಣದ ಸಂಗ್ರಹಣೆಯೇ ಇಡಿಯ ಸಮುದಾಯದ ಜೊತೆ ನಿರಂತರವಾಗಿ ನಡೆಯುವ ಒಂದು ಸಂವಾದದ ರೀತಿಯ ಚಟುವಟಿಕೆಯಾಗಬೇಕೆಂಬುದು. ಈ ರೀತಿಯ ಹಣ ಸಂಗ್ರಹಣೆಯ ಕಾರ್ಯವೇ ಒಂದು ರಾಜಕೀಯ ಚಟುವಟಿಕೆಯಾಗಿಬಿಡುತ್ತದೆ. ಗಾಂಧೀಜಿ—ಸಂಘಟನೆ, ಚಳವಳಿಯ ಹಂತದಲ್ಲಿ ಯಾವಾಗಲೂ ಈ ಮಾತನ್ನು ಹೇಳುತ್ತಿದ್ದರು. ಒಂದು ಸಂಘಟನೆಯಲ್ಲಿ ಒಂದು ಲಕ್ಷ ಹಣ ಇಟ್ಟುಕೊಂಡು ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದಲ್ಲ. ಒಬ್ಬೊಬ್ಬರ ಹತ್ತಿರವೇ ಚಿಕ್ಕ ಚಿಕ್ಕ ಹಂತದಲ್ಲಿ ಹಣ ಸಂಗ್ರಹಣೆ ಮಾಡುವುದು, ಅವರಿಗೆ ಇಂತಹ ಚಟುವಟಿಕೆಗಳ ಬಗ್ಗೆ ಬಿಡಿಸಿ, ಬಿಡಿಸಿ ಹೇಳುವುದು—ಇಂತಹ ಕ್ರಿಯೆಗಳಿಂದಾಗಿ ಹಣ ಸಂಗ್ರಹಣೆಯೇ ಒಂದು ರಾಜಕೀಯ ಚಟುವಟಿಕೆಯಾಗಿಬಿಡುತ್ತದೆ. ಇದರ ಅರ್ಥಮಂತಿಕೆಯ ನಿಟ್ಟಿನಲ್ಲಿ ನಡೆದ ಚರ್ಚೆಯಲ್ಲಿ ಹೀಗೆ ಸಣ್ಣ-ಪುಟ್ಟ ರೀತಿಯಿಂದ ಹಣ ಸಂಗ್ರಹಿಸುವುದು, ಮನೆ ಮನೆಗೆ ಹೋಗಿ ಪತ್ರಿಕೆ ಮಾರುವುದು ಅಗತ್ಯ ಎನ್ನುವ ಅಭಿಪ್ರಾಯ ಮೂಡಿ ಬಂತು. ವೈಯಕ್ತಿಕವಾಗಿ ಹಣ ಹಾಕಿ ಸುಮ್ಮನಾಗಿ ಬಿಡುವುದಾಗಲೀ ಅಥವಾ ಕೊಡಬಲ್ಲಂತಹ ಸಂಸ್ಥೆಗಳಿಂದ ಆಜೀವ ಚಂದಾ ಸಂಗ್ರಹಿಸುವುದಾಗಲೀ ತಪ್ಪು ಎಂದಲ್ಲ. ಆದರೆ ಕೆಲವು ಸದಸ್ಯರು ತಮ್ಮ ಮೊತ್ತ 425 ರೂ ಸಂಗ್ರಹಿಸಲು ಪ್ರತಿ ತಿಂಗಳು 10 ರೂ ಇಸಿದುಕೊಳ್ಳುವುದು, 25ರೂ ಚಂದಾಕ್ಕಾಗಿ ನಿರಂತರವಾಗಿ ಪತ್ರಗಳನ್ನು ಬರೆಯುವುದು, ಇತರರಿಗೆ ತಿಂಗಳಿಗೆ ಒಂದು ಚಂದಾ ಮಾಡಿಸಿಕೊಡಿ ಎಂದು ಕಮಿಟ್ ಮಾಡಿಸುವುದು ಈ ಚಟುವಟಿಕೆಗಳ ಹಿಂದಿರುವ ರಾಜಕೀಯ ದೃಷ್ಟಿಕೋನ ಗಮನಿಸಬೇಕು ಎಂದರು. ಕೈಯಿಂದ ಹಣ ಹಾಕಿ ಪತ್ರಿಕೆ ನಡೆಸುತ್ತೇವೆ ಎಂಬುದು ಪತ್ರಿಕೆಯ ಬಗ್ಗೆ ಪೊಸೆಸೀವ್ ಆದ ಭಾವನೆ ಹುಟ್ಟು ಹಾಕುತ್ತದೆ. ಮಾನಸ ಬರಿಯ ಕೆಲವರ ಸ್ವತ್ತಾಗದೆ ಸಹೃದಯ ಉಳ್ಳವರದ್ದಾಗಿರಬೇಕೆಂದರೆ ಆಸಕ್ತಿ ಉಳ್ಳವರೆಲ್ಲರಿಂದಲೂ ಹಣ ಎತ್ತಬೇಕು. ಹಣ ಸಂಗ್ರಹಣೆ ಒಂದು ರಾಜಕೀಯ ಚಟುವಟಿಕೆಯಾಗಬೇಕು, ಹಾಗೆಯೇ ಬದ್ಧತೆಯ ಅಭಿವ್ಯಕ್ತಿ ಕೂಡಾ ಆಗಬೇಕು. ಈ ಕಾರಣದಿಂದ ಕಷ್ಟವಾದರೂ ಬೇರೆ ಬೇರೆ ವಿಧಾನದಿಂದ ಹಣ ಎತ್ತುವ ಪ್ರಯತ್ನ ಒಳ್ಳೆಯದು ಎನ್ನಿಸಿತು. ಈ ಪ್ರಯತ್ನದ ಬಗ್ಗೆ ನಮಗೆ ಗೌರವವಿದೆ, ಹಾಗೆಯೇ ಅರ್ಥಪೂರ್ಣ ಕೂಡಾ ಎನ್ನಿಸಿದೆ. ನಮಗೆ ಪರಿಚಯವಿರುವ ಕೆಲವರಿಂದ ಪ್ರತಿ ತಿಂಗಳು 10 ರೂ ಅಥವಾ 5ರೂ ಎತ್ತುತ್ತೇವೆ. ಹಣದ ಮುಗ್ಗಟ್ಟು ಎಲ್ಲರಿಗೂ ಸಮಸ್ಯೆಯಾಗಿರುವ ಕಾಲದಲ್ಲಿ ಅದಕ್ಕಿಂತ ಹೆಚ್ಚಿನದನ್ನು ಕೇಳಲು ಮನಸ್ಸು ಬರುವುದಿಲ್ಲ. ಅಂತದರಲ್ಲಿ ಕೆಲವರು 25 ರೂ ಕೂಡಾ ಕೊಟ್ಟಿದ್ದಾರೆ. ಸಂಪಾದಕ ಮಂಡಳಿಯ ಸದಸ್ಯರು ಸ್ನೇಹಿತೆಯರಿಂದ ಹೀಗೆ ಸಂಗ್ರಹಿಸಿದ್ದಾರೆ. ಯಾವ ತಿಂಗಳೂ ತಪ್ಪಿಸದೇ.—ಒಂದು ತಿಂಗಳು ತಪ್ಪಿಸಿದರೆ 2 ತಿಂಗಳದನ್ನೂ ಒಟ್ಟಿಗೇ ಕೊಡುತ್ತಾರೆ. ಹೋದ ಕೂಡಲೇ ಕೊಟ್ಟು ಬಿಡುತ್ತಾರೆ. "ನಾವಂತೂ ಏನೂ ಮಾಡುವುದಿಲ್ಲ, ನೀವಾದರೂ ಮಾಡುತ್ತಿದ್ದೀರಾ, ನಮ್ಮ ಕೈಲಾಗುವುದು ಇಷ್ಟೇ ಇದನ್ನಾದರೂ ಮಾಡುತ್ತೇವೆ", ಎಂದು ಹೇಳಿ ನಮ್ಮ ಮನಸ್ಸಿನ 'guilt'ನ್ನು ಹಗುರ ಮಾಡು

ತ್ತಾರೆ. ನಾವು ಮಾಡುವುದು ಅರ್ಥಪೂರ್ಣ ಎಂದು ಅವರ ನಂಬಿಕೆ. ಅವರ ನಂಬಿಕೆಯನ್ನು ಹೆಚ್ಚು ನಿಜವಾಗಿಸಲು ಮನಸ್ಸು ಧೃಡವಾಗುತ್ತದೆ. "ಏನು ನಿಮ್ಮ ಪತ್ರಿಕೆ, ಏನ್ ಸಾಧಿಸುತ್ತೀರಿ ಇದರಿಂದ, ಸಂಚಿಕೆ ಬರಲಿ ನೋಡೋಣ, ಆಮೇಲೆ ಚಂದಾ ಕೊಡುತ್ತೇವೆ" ಅನ್ನೋದನ್ನೇ ಕೇಳಿ ರೋಸಿದಾಗ ಮೇಲಿನ ಸ್ನೇಹಿತೆಯರ ಮಾತು ತಂಪನ್ನೀಯುತ್ತದೆ.

ಸಂಪಾದಕೀಯ ಮಂಡಳಿಯ ಸದಸ್ಯರೊಬ್ಬರ ಪಕ್ಕದ ಮನೆ ಗುಜರಾತಿ ಸ್ನೇಹಿತೆಗೆ ಪತ್ರಿಕೆಯ ಬಗ್ಗೆ ಹೇಳಿಯೇ ಗೊತ್ತು. ಕನ್ನಡ ಓದಲು ಬಾರದ ಆಕೆ ಪತ್ರಿಕೆಗೆ ಲೆಕ್ಕ ಬರೆಯುವ ರೆಜಿಸ್ಟರ್ ಸಹಾಯಿಸಿದ್ದಾರೆ. ಗೆಳತಿ ಗೀತಾ ಹುಂಡಿ ನೀಡಿದ್ದಾರೆ. ಆಫೀಸಿನ ಪಕ್ಕದ ಮನೆ ಭಾಗ್ಯಮ್ಮ ನಿಮಗೆ ಬೇಕಾದ್ರೆ ಹೇಳಿ ನಾನು ಮೈದಾ ಪೇಸ್ಟ್ ಮಾಡಿ ಕೊಡ್ತೀನಿ ಅಂತಾರೆ, ಮಾಡಿಯೂ ಕೊಟ್ಟಿದ್ದಾರೆ. ವಿಳಾಸ ಅಂಟಿಸೋದು, ಪಿನ್ ಮಾಡೋದಿದ್ರೆ ಹೇಳಿ, ಬಿಡುವಿದ್ದಾಗ ಮಾಡಿ ಕೊಡ್ತೀವಿ ಅಂತಾರೆ ಕೆಲವರು. ಪತ್ರಿಕೆ ಮಡಚುತ್ತಾ ಇರುವಾಗ ಸಣ್ಣ-ಪುಟ್ಟ ಮಕ್ಕಳು ನಾವೂ ಮಾಡ್ತೀವಿ ಆಂಟಿ ಅಂತ ಸರಸರ ಮಡಿಸಿ ಪಿನ್ ಮಾಡಿ ಕೊಡುತ್ತವೆ. ಇವೆಲ್ಲ ಪುಟ್ಟ ಪುಟ್ಟ ಸಂಗತಿಗಳಾದರೂ ಹೊಸ ವಿಶ್ವಾಸವನ್ನು ಎದೆಯಲ್ಲಿ ತುಂಬಿವೆ. ಒಂದು ಸಾಂಸ್ಕೃತಿಕ ನೆಲೆಯನ್ನು ಹುಡುಕುವಲ್ಲಿ ಇವೆಲ್ಲ ಅರ್ಥಪೂರ್ಣ ಎನಿಸುತ್ತವೆ. ಹೀಗೆ ಸಣ್ಣ–ಪುಟ್ಟ ಹಂತಗಳಲ್ಲಿ ಹಣ ಸಂಗ್ರಹಿಸುವುದು ಅಗತ್ಯ ಎನ್ನುವುದರ ಜೊತೆಗೇ ನಿರಂತರವಾಗಿ ಮಹಿಳೆಯರು ಹಾಗೂ ಇತರರೊಟ್ಟಿಗೆ ಸಂವಾದ ನಡೆಸಲೂ ಈ ಮೂಲಕ ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯ ಅವಲೋಕನದಲ್ಲಿ ಮೂಡಿ ಬಂತು. ಪ್ರತಿತಿಂಗಳೂ ಹತ್ತು ರೂ. ಸಹಾಯ ಧನ ನೀಡುವ ಇವರನ್ನು ಮಾನಸ ಕೃತಜ್ಞತೆಯಿಂದ ನೆನೆಯುತ್ತಿದೆ.

ಗೀತಾದಾಸ್	ಎ.ಟಿ. ಶ್ರೀನಿವಾಸ
ಗೀತಾ	ಮಂಜುಳ
ತುಳಸೀದೇವಿ	ಮಂದಾಕಿನಿ
ವಿಜಯಲಕ್ಷ್ಮಿ	ಅಶ್ವತ್ಥ ನಾರಾಯಣ ರೆಡ್ಡಿ
ಅರುಂಧತಿ	ಶಶಿಕಲ
ಗಾಯತ್ರಿ	
ರಂಜನಾ	ವೇದ

3. 'ಪತ್ರಿಕೆಯ ವೈಚಾರಿಕ ನಿಲುವು ಅಥವಾ ಬದ್ಧತೆ'

ಈ ಪ್ರಶ್ನೆಯ ಹಿನ್ನೆಲೆಯಾಗಿ 1993ರ ಸಂಚಿಕೆಗಳನ್ನು ಕುರಿತು ಚರ್ಚಿಸಲಾಯಿತು. ಇನ್ನು ಕಳೆದ ಒಂದು ವರ್ಷದಲ್ಲಿ ಮಾನಸ ನಡೆದು ಬಂದ ಹಾದಿಯೆಡೆಗೆ ಒಂದು ತ್ವರಿತವಾದ ನೋಟವನ್ನು ಹರಿಸುವದಾದರೆ—

1993ರಲ್ಲಿ 'ಮಾನಸ'ದಲ್ಲಿ ಬರೆದವರು ನಲವತ್ತೊಂಬತ್ತು ಜನ. ಜತೆಗೆ ಇಂಗ್ಲೀಷಿನಿಂದ ಅನುವಾದಿಸಲ್ಪಟ್ಟ ಹಲವು ಬರಹಗಳು ಎರಡು ಸಂದರ್ಶನಗಳು ಎಲ್ಲಾ ಇವೆ. 1992ನೇ ವರ್ಷ ಕೋಮು ಹಿತಾಸಕ್ತಿಯ ಹಿಂದೆಂದೂ ಕಾಡಿರದಂತಹ ಅತೀ ವಿಕೃತ ಮುಖವನ್ನು ಪ್ರಕಟಪಡಿಸುತ್ತಲೇ ಕೊನೆಗೊಂಡಾಗ, ಅದರ ವಿಷ್ಫಲತೆಯೇ 93ರಲ್ಲಿ ಕಾಣುವ ಪ್ರಬಲ ಅಂಶವಾದ್ದರಿಂದ್ದ, ಸಹಜವಾಗಿಯೇ ಮಾನಸ ಕೂಡ ಆ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುತ್ತಲೇ ವರ್ಷಾರಂಭಮಾಡಿದೆ, ಹಲವು ನಿಟ್ಟಿನಲ್ಲಿ ಚರ್ಚಿಸಿದೆ. ಅದೇನೇಯಾದರೂ 'ನಂದಿತಾ ಹಕ್ಸರ್' ತಮ್ಮ ಸಂದರ್ಶನದ ಕೊನೆಯಲ್ಲಿ ವ್ಯಕ್ತಪಡಿಸುವ "ಭಯಂಕರವಾಗಿ ಬೆಳೆಯುತ್ತಿರುವ ಕೋಮುವಾದೀ ಪ್ರವಾಹವನ್ನು ಮೆಟ್ಟಿ ನಿಲ್ಲುವುದು ಹೇಗೆ ಎನ್ನುವುದೇ ಇಂದು ಭಾರತದಲ್ಲಿ ಸ್ತ್ರೀವಾದಿ ಚಳವಳಿಯ ಮುಂದಿರುವ ಅತಿ ದೊಡ್ಡ ಸವಾಲು" ಎಂಬ ಆತಂಕವೇ ಉಳಿದುಕೊಳ್ಳುತ್ತದೆ.

'ಮಹಿಳೆ ಮತ್ತು ಸಮೂಹ ಮಾಧ್ಯಮ' ಮಾನಸ ಈ ವರ್ಷದಲ್ಲಿ ವ್ಯಾಪಕ ಚರ್ಚೆಗೊಳಪಡಿಸಿರುವ ವಿಷಯ. ಜಾಹಿರಾತು, ಸಿನಿಮಾಗಳು ಇಲ್ಲಿನ ಕೇಂದ್ರ ಬಿಂದು. ಪುರುಷ ಪ್ರದಾನ ವ್ಯವಸ್ಥೆಯ ಮತ್ತು ಅದೇ ಮೌಲ್ಯಗಳನ್ನು ಆತುಕೊಂಡಿರುವ ರಾಜ್ಯಾಂಗದ ಹಿತಾಸಕ್ತಿಗಳು ಇಲ್ಲಿ ಹೇಗೆ ಸ್ತ್ರೀಯನ್ನು ತಮ್ಮ ಅಧಿಕಾರದ, ತೆವಲುಗಳ ಕೈಗೊಂಬೆಗಳಷ್ಟೇ ಆಗಬಲ್ಲಂತ ಪ್ರತಿಮೆಗಳಾಗಿ ರೂಪಿಸುತ್ತವೆ, ಬಳಸುತ್ತವೆ ಎಂಬುದು ಈ ಎಲ್ಲಾ ಚರ್ಚೆಗಳಲ್ಲಿ ಧ್ವನಿತಗೊಂಡಿರುವ ಮುಖ್ಯ ಅಂಶ.

ರಾಷ್ಟ್ರೀಯ ಮತ್ತು ಪ್ರಾಂತೀಯ ಮಹಿಳಾ ಸಮಾವೇಶಗಳು ಮಹಿಳಾ ಅಧ್ಯಯನಗಳ ಸಮ್ಮೇಳನ, ವಿಶ್ವ ಮಹಿಳಾ ಸಮಾವೇಶಗಳು ಇವುಗಳನ್ನು ಪರಿಚಯಿಸುವ, ಇವುಗಳ ಬಗ್ಗೆ ಮಾಹಿತಿ ಒದಗಿಸುವುದರ ಜತೆಗೆ ಸಂಕ್ಷಿಪ್ತ ವಿಶ್ಲೇಷಣೆಯನ್ನೂ ವರ್ಷದಲ್ಲಿ ತರಲು ಪ್ರಯತ್ನಿಸಲಾಗಿದೆ. ಇದರ ಜತೆಗೆ ಮಹಿಳಾಅಧ್ಯಯನ

ಗಳ ಒಂದು ಒಟ್ಟಾರೆಯಾದ ವಿಶ್ಲೇಷಣೆಯನ್ನು ವಿಸ್ತಾರವಾಗಿಯೇ ಚರ್ಚಿಸಲಾಗಿದೆ. ಹಾಗೆಯೇ ಮಹಿಳಾ ಚಳವಳಿಯ ಸಾಧಕ-ಬಾಧಕಗಳ ಮುಂದುವರೆದ ಚರ್ಚೆಯ ಎಳೆ ಇದೆ.

ಇಕೋ-ಸ್ತ್ರೀವಾದ ಈ ವರ್ಷ ಚರ್ಚೆಗೆ ಎತ್ತಿಕೊಂಡಿರುವ ಮತ್ತೊಂದು ವಿಷಯ. ಅದು ಕಟ್ಟಿಕೊಡುವ ಮಹಿಳೆ-ಪ್ರಕೃತಿ ಸಂಬಂಧದ ವಿಚಾರ ಧಾರೆಯನ್ನೂ ನಿರ್ದಿಷ್ಟ ಸನ್ನಿವೇಶಗಳಡಿ ಹೆಚ್ಚು ಮೂರ್ತಕತೆಯೆಡೆ ಗೊಯ್ಯುವ ಪ್ರಯತ್ನದ ಪ್ರಾರಂಭ ಈ ವರ್ಷದಲ್ಲಿ ನಡೆದಿದೆ.

ಮಹಿಳೆಯರ ಆರ್ಥಿಕಾಭಿವೃದ್ಧಿಯಲ್ಲಿ ಸರ್ಕಾರ ಮತ್ತು ಸರ್ಕಾರೇತರ ಘಟಕಗಳು ಹಮ್ಮಿಕೊಳ್ಳುತ್ತಿರುವ ಚಟುವಟಿಕೆಗಳ ಕೂಲಂಕುಶ ಪರಿಚಯವನ್ನು ಮಾಡಿಸುತ್ತಾ ಅದರೆಡೆಗಿನ ಒಂದು ಒಟ್ಟಾರೆಯಾದ ಟೀಕೆಯನ್ನು ಕಟ್ಟಿಕೊಡುವುದು ಈ ವರ್ಷದಲ್ಲಿ ಪ್ರಾರಂಭವಾದ ಮತ್ತೊಂದು ಪ್ರಯತ್ನ. ಇದು ಮುಂದುವರೆಯುತ್ತದೆ.

ಇನ್ನು ಸಾಹಿತ್ಯ ಕ್ಷೇತ್ರಕ್ಕೆ ಬಂದರೆ, ಸಿಡಿಲಮರಿಯಂತಹ ತೀಕ್ಷ್ಣ, ದಿಟ್ಟ ಲೇಖಕಿ ಅಮೃತಾಪ್ರೀತಂ ಅವರ ಹಲವು ಕತೆಗಳನ್ನು, ಲೇಖಕಿಯಾಗಿ ಅವರ ಒಳತೋಟಿಗಳನ್ನು ಅನುವಾದಿಸಲಾಗಿದೆ. ಹತ್ತೊಂಬತ್ತನೇ ಶತಮಾನದ ಅಮೇರಿಕಾದ ವಿಶಿಷ್ಟ ಕವಿಯತ್ರಿ 'ಎಮಿಲಿ ಡಿಕಿನ್‌ಸನ್'ಳ ಕುತೂಹಲಕಾರೀ ಬದುಕು-ಬರಹಗಳು ಇಲ್ಲಿ ಚರ್ಚಿತಗೊಂಡಿರುವ ಇನ್ನೊಂದು ಮುಖ್ಯ ಅಂಶ. ಮಾತೆ ಮಹಾದೇವಿಯರ ಕೃತಿಗಳು ಕೂಡ. ಅಲ್ಲದೆ ಹಲವಾರು ಕವನಗಳಲ್ಲಿ, ಕತೆಗಳಲ್ಲಿ ವಿವಿಧ ಲೇಖಕಿಯರು ತಮ್ಮ ಅತ್ಯಂತ ಆಪ್ತಭಾವನೆಗಳನ್ನು ಮಾನಸದ ಹಾಳೆಗಳಲ್ಲ ಅಚ್ಚೊತ್ತಿಸಿದ್ದಾರೆ.

ಮಹಿಳೆಯರ ಮೇಲಿನ ಹಿಂಸಾಚಾರ ವರ್ಷದುದ್ದಕ್ಕೂ ಚರ್ಚೆಗೆ ಬಂದಿರುವ ಮತ್ತೊಂದು ಅಂಶ. ಇಲ್ಲಿ ಸೈದ್ಧಾಂತಿಕ ನೆಲೆಯಲ್ಲಿನ ಚರ್ಚೆಯ ಜತೆಗೆ ಘಟನೆಗಳು, ವಯುಕ್ತಿಕ ಅನುಭವಗಳು ದಾಖಲುಗೊಂಡಿವೆ.

ಈ ವರ್ಷದಲ್ಲಿ ಮೂಡಿ ಬಂದಿರುವ ಎರಡು ವಿಭಿನ್ನ ವ್ಯಕ್ತಿತ್ವದ ಮಹಿಳೆಯರಾದ ನಂದಿತಾ ಹಕ್ಸರ್ ಮತ್ತು ಪ್ರಮೀಳಾ ಅವರ ಸಂದರ್ಶನಗಳು ಮಹಿಳಾ ಚಳವಳಿ ಗುರುತಿಸಬೇಕಾದ ಹಲವೊಂದು ಸೂಕ್ಷ್ಮ ಆಯಾಮಗಳೆಡೆಗೆ ಕಣ್ಣು ತೆರೆಸುತ್ತವೆ. ಎರಡು ಭಿನ್ನ ನೆಲೆಗಳನ್ನು ಗುರುತಿಸುತ್ತವೆ.

ತಮ್ಮ ನೋವುಗಳನ್ನು, ಆಲೋಚನೆಗಳನ್ನು, ದ್ವಂದ್ವಗಳನ್ನು ಹೇಗಾದರೂ ವ್ಯಕ್ತಪಡಿಸಲು ತುಡಿಯುವ ಅನೇಕ ಸಣ್ಣ-ದೊಡ್ಡ ವಯಸ್ಸಿನ ಮಹಿಳೆಯರು ಮಾನಸದ ಮೂಲಕ ಅದನ್ನು ತೋಡಿಕೊಳ್ಳುವ ಪ್ರಯತ್ನ ಮಾಡಿದ್ದಾರೆ, ಸಣ್ಣ-ಸಣ್ಣ ಬರಹಗಳ ರೂಪದಲ್ಲಿ. ಮಾನಸದ ಪ್ರತಿ ಸಂಚಿಕೆಯೂ ಇಂತಹವರಿಗಾಗಿಯೇ ಹಲವು ಪುಟಗಳನ್ನು ಮೀಸಲಿಟ್ಟಿದೆ.

ಈ ವರ್ಷದಲ್ಲಿ ಮೂರು ಜನ ಹೊರಗಿನವರು— ಉತ್ತನೂರು ರಾಜಮ್ಮ ವಿ. ಶೆಟ್ಟಿ, ಕೆ. ರಾಜೇಶ್ವರಿ ಗೌಡ ಮತ್ತು ಮಧುಮತಿ, ಮಾನಸದ ಒಂದೊಂದು ಸಂಚಿಕೆಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಇದೊಂದು ಅತ್ಯಂತ ಇತ್ಯಾತ್ಮಕ ಮತ್ತು ಉತ್ತೇಜಕಾರಿ ಅಂಶ.

ಪುಸ್ತಕಗಳು-ಇಂಗ್ಲೀಷ್ ಮತ್ತು ಕನ್ನಡ, ಪರಿಚಯಿಸಲ್ಪಟ್ಟಿದ್ದು ಅವು ಪುಸ್ತಕ ವಿಮರ್ಶೆ, ಸ್ತ್ರೀ ಸಂಚಯ, ವಿವರವಾದ ಪರಿಚಯ, ಕೇವಲ ಶೀರ್ಷಿಕೆ – ಲಭ್ಯತೆಗಳನ್ನಷ್ಟೇ ಉಳ್ಳ ಪರಿಚಯ ಹೀಗೆ ವಿವಿಧ ರೂಪದಲ್ಲಿವೆ. ಜತೆಗೆ ಸಿನೆಮಾ-ನಾಟಕಗಳ ವಿಮರ್ಶೆ, ಸುದ್ದಿ ಸಂಕಲನ, ವಿಶೇಷ ವಿಚಾರಗಳ ಮಾಹಿತಿ ಇದೆ.

ಹೊಸ ಗರ್ಭ ನಿರೋಧಕಗಳು, ಬೇವನ್ನು ಪೇಟೆಂಟ್ ಮಾಡುತ್ತಿರುವುದರ ಕುರಿತ ಅರಿವು ಮೂಡಿಸುವ, ಅಂಗನವಾಡಿ ಕಾರ್ಯಕರ್ತೆ ಶರಣವ್ವನ ಸಂಶಯಾಸ್ಪದ ಸಾವನ್ನು ಕುರಿತ ಕ್ಯಾಂಪೈನಿಗೆ ಸಂಬಂಧಪಟ್ಟ ಬರಹಗಳಿವೆ.

ಹೊಸ ಆರ್ಥಿಕ ನೀತಿ, ರಾಚನಿಕ ಹೊಂದಾಣಿಕೆಗಳ ಬಗ್ಗೆ 92ರಲ್ಲಿ ಪ್ರಾರಂಭವಾದ ಚರ್ಚೆ 93ರಲ್ಲಿ ಮುಂದುವರಿಯದೇ ಹೋದದ್ದು ಕೊರತೆಯಾಗಿ - ಕೊರಗಾಗಿ ಕಾಣುತ್ತದೆ.

ಮಹಿಳಾ ಪ್ರಶ್ನೆಯ ಹಲವು ಆಯಾಮಗಳನ್ನು ಎತ್ತಿಕೊಳ್ಳುತ್ತಲೇ ಒಂದು ವಿಸ್ತಾರ ಅರ್ಥೈಸುವಿಕೆಗೆ ಒಡ್ಡುವ ಪ್ರಯತ್ನ 'ಮಾನಸ' ಮಾಡುತ್ತಲೇ ಬಂದಿದ್ದರೂ ಅನೇಕ ಅಂಶಗಳು ಈ ಪರಿಧಿಯೊಳಕ್ಕೆ ಬರದೇ ಇರುವುದು ವಾಸ್ತವವೇ. ಉದಾಹರಣೆಗೆ ಹೇಳಬೇಕೆಂದರೆ ಮಹಿಳೆ ಮತ್ತು ರಾಜಕೀಯಕ್ಕೆ ಸಂಬಂಧಿಸಿದಂತೆ (ನೇರಾರ್ಥದಲ್ಲಿ) ಎರಡು ಪುಟದ ಒಂದು ಸಣ್ಣ ಲೇಖನವನ್ನು ಬಿಟ್ಟರೆ ಆ ಪ್ರಶ್ನೆಯನ್ನು ಹೆಚ್ಚು ವಿಸ್ತಾರವಾಗಿ ನಿರ್ವಹಿಸಲು ಸಾಧ್ಯವಾಗದೇ ಹೋಗಿರುವ ಕೊರತೆಯೇ ಉಳಿಯು

ತ್ತದೆ. ಕಾನೂನು, ಆರೋಗ್ಯ-ಶಿಕ್ಷಣ ಇತ್ಯಾದಿಗಳನ್ನು ಈ ಗುಂಪಿಗೇ ಸೇರಿಸಬಹುದು.

'ಮಾನಸ'ವನ್ನು 'ಮಾನುಷಿ' ತರಹ ತರಲು ಏಕೆ ಪ್ರಯತ್ನಿಸಬಾರದು ಎಂದು ಹಲವಾರು ಓದುಗರು ನಮ್ಮನ್ನು ಪ್ರಶ್ನಿಸಿದ್ದಾರೆ. ಅದಕ್ಕೆ ನಮ್ಮದೇ ಆದ ಸಾಕಷ್ಟು ಮಿತಿಗಳಿದ್ದಾಗ್ಯು ಈ ನಿಟ್ಟಿನತ್ತ ದೃಷ್ಟಿ ಹಾಯಿಸಿದಾಗ ಚರ್ಚೆ ಪತ್ರಿಕೆಯ ತಾತ್ವಿಕ ಬದ್ಧತೆಯ ಕಡೆಗೆ ತಿರುಗಿತು. ನಾವೆಲ್ಲ ವರ್ಗ, ಜಾತಿ, ಪಿತೃಪ್ರಧಾನ ಮೌಲ್ಯಗಳನ್ನು ಒಟ್ಟಿಗೇ ಹೋರಾಡಬೇಕೆನ್ನುವ ಸೋಷಲಿಸ್ಟ್ ಫೆಮಿನಿಸ್ಟರ ಒಂದು ವಿಶಾಲವಾದ ವೈಚಾರಿಕ ನಿಲುವನ್ನು ಹಂಚಿಕೊಳ್ಳುತ್ತೇವೆ ನಿಜ. ಆದರೆ ಈ ಮೂರು ಅಂಶಗಳೂ ಮಹಿಳಾ ಸಮಸ್ಯೆಗಳಲ್ಲಿ ಹೇಗೆ ತಳಕು ಹಾಕಿಕೊಂಡಿವೆ ಎನ್ನುವುದನ್ನು ವಿವರವಾಗಿ ಬಿಡಿಸಿ ಇಡುವ, ಜೊತೆಗೆ ಈ ಮೂರನ್ನೂ ಒಟ್ಟಿಗೇ ಹೋರಾಡ ಬಲ್ಲ ಸಮಸ್ಯೆಗಳತ್ತ ನಾವು ಗಮನ ಕೇಂದ್ರೀಕರಿಸಿ ಅಭ್ಯಸಿಸಬೇಕೆಂಬುದು, ಲೇಖನಗಳನ್ನು ಪ್ರಕಟಿಸಬೇಕೆಂಬುದನ್ನು ಸಂಪಾದಕೀಯ ಮಂಡಳಿ ಗಂಭೀರವಾಗಿ ಆಲೋಚಿಸಬೇಕಾಗಿದೆ ಎಂಬ ಅಭಿಪ್ರಾಯ ಮೂಡಿ ಬಂತು. ಮುಂಬರುವ ಸಂಚಿಕೆಗಳಲ್ಲಿ ಈ ಬಗ್ಗೆ ವಿವರವಾಗಿ ಅಭ್ಯಸಿಸಿ ಬರೆದ ಲೇಖನಗಳಿಗೆ ಹೆಚ್ಚು ಆದ್ಯತೆ ನೀಡಬೇಕೆಂದು ತೀರ್ಮಾನಿಸಲಾಯಿತು. ನಮ್ಮ ಸುತ್ತ-ಮುತ್ತಲು ಇರುವ ಅಸಂಘಟಿತ ಮಹಿಳೆಯರ ಸಮಸ್ಯೆಗಳ ಬಗ್ಗೆ ಹೆಚ್ಚು ಹೆಚ್ಚು ಗಮನ ವಹಿಸಿ ಬರೆಯುವುದು, ಹಳ್ಳಿ-ಗಾಡು ಕೃಷಿ-ಕಾರ್ಮಿಕ ಮಹಿಳೆಯರ ಸಮಸ್ಯೆಗಳಿಗೆ ಹೆಚ್ಚು ಆದ್ಯತೆ ನೀಡುವುದು, ದಿನಗೂಲಿ ಮಾಡುವ ಮಹಿಳೆಯರ ಅನುಭವಗಳತ್ತ ಬೆಳಕು ಚೆಲ್ಲುವುದು, ಕೆಲವು ನಿರ್ದಿಷ್ಟ ಕಾರ್ಖಾನೆಗಳ ಮಹಿಳಾ ಕಾರ್ಮಿಕರ ಸಂಘಟನೆ, ಇಮ್ಮಡಿ ದುಡಿತ ಇಂತಹ ಸಮಸ್ಯೆಗಳ ಬಗ್ಗೆ ಅಭ್ಯಸಿಸಿ ಬರೆಯುವುದು, ಹೀಗೆ 'ಫೋಕಸ್' ಮಾಡುವುದರ ಮೂಲಕ ಬಂಡವಾಳ ಶಾಹಿತ್ವ ಹಾಗೂ ಪಿತೃ ಪ್ರಧಾನ ಅಂಶಗಳು ಒಟ್ಟೊಟ್ಟಿಗೇ ಹೇಗೆ ಮಹಿಳೆಯರನ್ನು ನಿರ್ಬಂಧಿಸುತ್ತವೆ ಎಂಬುದರ ಮೇಲೆ ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯ ಮೂಡಿ ಬಂತು. ವರದಕ್ಷಿಣೆ, ಅತ್ಯಾಚಾರ ಇಂತಹ ಸಮಸ್ಯೆಗಳಲ್ಲಿಯೂ ವರ್ಗ ಹಾಗೂ ಲಿಂಗಾಧಾರಿತ ಅಂಶಗಳು ಕೆಲಸ ಮಾಡುತ್ತಿವೆ ಎಂಬುದನ್ನು ಸರಳ ಭಾಷೆಯಲ್ಲಿ ಹೇಳುವಂತಹ ಲೇಖನಗಳನ್ನು ಪ್ರಕಟಿಸುವುದು ಅಗತ್ಯ ಎಂದು ತೀರ್ಮಾನಿಸಲಾಯಿತು. 94ರ ಸಂಚಿಕೆಗಳಲ್ಲಿ ವೈಚಾರಿಕತೆಯ ಕಡೆಗೆ, ಮಹಿಳಾ ಚಳವಳಿಯ ಬದ್ಧತೆಯ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಅವಲೋಕನದಲ್ಲಿ ನಿರ್ಧರಿಸಲಾಯಿತು.

4. ಭಾರತದ ಮಹಿಳಾ ಚಳವಳಿಯಲ್ಲಿ 'ಮಾನಸ' ಪತ್ರಿಕೆಯ ಪಾತ್ರ

ನಾವು 'ಮಾನಸ'ದ ಪ್ರಕಟಣೆಯ ನಮ್ಮ ಪ್ರಯತ್ನದಲ್ಲಿ ಯಾವುದೇ ನಿರ್ದಿಷ್ಟ ಯಶಸ್ಸನ್ನು ಕೇಂದ್ರವಾಗಿಟ್ಟು ಕೊಂಡಿಲ್ಲ. ಮಾನಸ ತುಳಿಯುತ್ತಿರುವ ಹಾದಿ-ಗುರಿಗಿಂತ ಮುಖ್ಯವಾದುದೆಂಬುದು ನಮ್ಮೆಲರ ಬಲವಾದ ಅನಿಸಿಕೆ. ಪತ್ರಿಕೆಯ ಪ್ರಕಟಣೆಯೇ ಮಹಿಳಾ ಚಳುವಳಿಯ ಹಾದಿಯಲ್ಲಿನ ಒಂದು ಹೆಜ್ಜೆ ಎಂದು ನಾವು ಭಾವಿಸಿದ್ದೇವೆ. ಮಹಿಳಾ ಚಳುವಳಿಯಲ್ಲಿ 'ಮಾನಸ' ದಂತಹ ಪತ್ರಿಕೆಯ ಪಾತ್ರವನ್ನು ಗುರುತಿಸುವಾಗ ಚರ್ಚೆ ಭಾರತದ ಚಳುವಳಿಯತ್ತ ತಿರುಗಿತು. ಮಧ್ಯಮ ವರ್ಗದವರೇ ಹೆಚ್ಚು ಹೆಚ್ಚು ಭಾಗವಹಿಸುತ್ತಿರುವ (ಮಹಾರಾಷ್ಟ್ರ, ಆಂಧ್ರದ ಮಾಸ್ ಚಳುವಳಿಗಳ ಹೊರತಾಗಿ) ಮಹಿಳಾ ಸಂಘಟನೆಗಳು ಜನಪರವಾಗಿರುವ, ಸಾಮಾನ್ಯ ಮಹಿಳೆಗೆ ತಲುಪಬಹುದಾದಂತಹ ಒಂದು ಚಳುವಳಿಯನ್ನು ಹುಟ್ಟು ಹಾಕಿವೆಯೇ ಎಂಬ ಪ್ರಶ್ನೆಗೆ ಉತ್ತರ ನಿರಾಶಾದಾಯಕವಾಗಿರುತ್ತದೆ. ಭಾರತದ ಉದ್ದಗಲಕ್ಕೂ ಇರುವ ಮಹಿಳಾ ಸಂಘಟನೆಗಳು ಒಡೆದು ಛಿದ್ರ ಛಿದ್ರವಾಗಿವೆ. ಹಣಕಾಸಿನಿಂದ ಹಿಡಿದು ರಚನಾತ್ಮಕತೆಯವರೆಗೂ ಒಂದೊಂದು ಸಂಘಟನೆಯಲ್ಲೂ ವಿಭಿನ್ನವಾಗಿರತಕ್ಕಂತಹ ನಿಲುವುಗಳೇ ಕಂಡು ಬರುತ್ತವೆ. ಹಾಗಾಗಿ ಪರಿಪೂರ್ಣವಾದ 'ಸ್ವಾಯತ್ತತೆ' ಎನ್ನುವ ಕಲ್ಪನೆ ಮಹಿಳಾ ಚಳುವಳಿಯಲ್ಲಿ ವಾಸ್ತವವಾಗಿ ಧ್ವನಿಸುತ್ತಿಲ್ಲ. 'ಮಾನಸ' ದಂತಹ ಪತ್ರಿಕೆ ಮಹಿಳಾ ಚಳುವಳಿಯ ತಾತ್ವಿಕತೆ, ಸ್ವಾಯತ್ತತೆ, ಇತರ ಆಯಾಮಗಳ ಬಗ್ಗೆ ಓದುಗರಲ್ಲಿ ಒಂದು ಯೋಚನಾ ಕ್ರಮವನ್ನು ರೂಪಿಸುವಲ್ಲಿ 'ಕ್ಯಾಟಲಿಸ್ಟ್'- ಪಾತ್ರವನ್ನು ವಹಿಸುತ್ತಿದೆ. ಹೋರಾಟಗಳಲ್ಲಿ, ಮಹಿಳೆಯರನ್ನು ಕ್ರಿಯಾತ್ಮಕ ಸಂಘಟನೆಗಳಲ್ಲಿ ತೊಡಗಿಸಲು ಸಾಧ್ಯವಾಗದಂತಹ ನಮ್ಮದೇ ಮಿತಿಗಳನ್ನು ಹೊಂದಿರುವ ನಾವು ಪತ್ರಿಕೆಯ ಮೂಲಕ ಒಂದು ಯೋಚನಾ ಕ್ರಮವನ್ನು ರೂಪಿಸುವಲ್ಲಿ ಪತ್ರಿಕೆಯನ್ನು 'ಕ್ಯಾಟಲಿಸ್ಟ್' ಆಗಿಯೇ ಬಳಸಿಕೊಂಡು ಮುಂದುವರಿಯಬೇಕಾಗುತ್ತದೆ ಎಂಬ ಅಭಿಪ್ರಾಯ ಮೂಡಿ ಬಂತು.

ಸ್ವ ಉದ್ಯೋಗ-ಯುವತಿಯರಿಗೊಂದು ಕರೆ

ಎಸ್. ಟಿ. ಎರ್ರಿಸ್ವಾಮಿ

"ಸತತವಾಗಿ ಮೂರು ವರ್ಷಗಳ ಕಾಲ ಕಾಲೇಜು ವಿದ್ಯಾಭ್ಯಾಸವನ್ನು ಮಾಡಿ ಇತರರ ಲೆಕ್ಕ ಬರೆಯುವ ಸರ್ಕಾರಿ ನೌಕರಿಗೆ ಹೋಗುವ ಬದಲು ಸ್ವಉದ್ಯೋಗ ಮಾಡಿ ನಮ್ಮ ಲೆಕ್ಕ ನಾವು ಬರೆಯುವುದು ಹೆಚ್ಚು ಅರ್ಥ ಪೂರ್ಣವಾದುದು" - ಇದು ಧರ್ಮಸ್ಥಳದ ಧರ್ಮಾಧಿಕಾರಿ ಹಾಗೂ ಗ್ರಾಮಾಭಿವೃದ್ಧಿ ಮತ್ತು ಸ್ವಉದ್ಯೋಗ ತರಬೇತಿ ಸಂಸ್ಥೆಗಳ ಅಧ್ಯಕ್ಷರೂ ಆದ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರ ಮಾತಿದು.

ಇಂದು ಲಕ್ಷಾಂತರ ಯುವತಿಯರು ಪುರುಷರಿಗೆ ಸರಿ ಸಮಾನವಾಗಿ ಶಾಲಾ ಕಾಲೇಜುಗಳಿಂದ ವಿದ್ಯಾಭ್ಯಾಸವನ್ನು ಮುಗಿಸಿ ಹೊರ ಬರುತ್ತಿದ್ದಾರೆ. ಬಹಳಷ್ಟು ವಿದ್ಯಾವಂತ ಯುವತಿಯರ ಆದ್ಯ ಗಮನ, ಹರಿ ಪ್ರಯತ್ನ ಮಾಡಿ ಸರ್ಕಾರಿ ನೌಕರಿ ಹಿಡಿಯುವುದೇ ಆಗಿದೆ. ಕಾರಕೂನರನ್ನು ನಿರ್ಮಿಸುವ ಕಾರ್ಖಾನೆಗಳಂತಿರುವ ನಮ್ಮ ಶಾಲಾಕಾಲೇಜುಗಳು ಹಾಗೂ ಶಿಕ್ಷಣ ಪದ್ಧತಿಯೂ ಇದಕ್ಕೆ ಕಾರಣವಿರಬಹುದು.

ಒಂದು ಅಂದಾಜಿನ ಪ್ರಕಾರ ಕರ್ನಾಟಕ ರಾಜ್ಯವೊಂದರಲ್ಲೇ ಸುಮಾರು 8 ಲಕ್ಷ ಜನ ಯುವತಿಯರು ತಮಗೆ ಸರ್ಕಾರಿ ನೌಕರಿ ಬೇಕು ಎಂದು ಉದ್ಯೋಗ ವಿನಿಮಯ ಕಛೇರಿಗಳಲ್ಲಿ ತಮ್ಮ ಹೆಸರುಗಳನ್ನು ನೊಂದಾಯಿಸಿದ್ದಾರೆ. ಹತ್ತಾರು ವರ್ಷಗಳಿಂದ ಈ ಯುವತಿಯರು ಬಕಪಕ್ಷಿಗಳಂತೆ ನೌಕರಿಗಾಗಿ ಕಾಯುತ್ತಲೇ ಇದ್ದಾರೆ. ಮಹಿಳೆಯರಿಗೂ ಕೂಡ ಮೀಸಲಾತಿ ಮೂಲಕ ಕೆಲವೊಂದು ನೌಕರಿ ನೀಡಿದರೂ ಕಲಿತವರೆಲ್ಲರಿಗೂ ಸರ್ಕಾರಿ ನೌಕರಿ ಕೊಡುವುದು ಕನಸಿನ ಮಾತೇ ಸರಿ.

ನೌಕರಿ ಬೇಡುವ ಜನ ಹಾಗೂ ಸಿಗುತ್ತಿರುವ ಸಂಖ್ಯೆ ಇವೆರಡರ ನಡುವೆ ಅಜಗಜಾಂತರ ವ್ಯತ್ಯಾಸವನ್ನೇ ನಾವು ಕಾಣುತ್ತಿದ್ದೇವೆ. ಹಾಗಾಗಿ ಯಾರು ನಿಯತ್ತಿನಿಂದ, ನೀತಿಯಿಂದ ಜನಸೇವೆ ಮಾಡುವ ಪ್ರಬಲ ಹಂಬಲ ಹೊಂದಿ ಉನ್ನತ ಶಿಕ್ಷಣದ ಮೂಲಕ ಸರ್ಕಾರಿ ನೌಕರಿ ಪಡೆಯುವೆನೆಂದು ಹಂಬಲಿಸುವರೋ, ಅಂತಹವರಿಗೆ ನೌಕರಿ ಸಿಗದೆ, ಯಾರು ಭ್ರಷ್ಟತೆ, ಲಂಚಗುಳಿತನ, ಪುಡಾರಿಗಳ ಪ್ರಭಾವ ಬೀರುವರೋ ಅಂತಹವರಿಗೆ ನೌಕರಿ ಸಿಗುವ ಸಾಧ್ಯತೆ ಹೆಚ್ಚಾಗಬಹುದು. ಹೀಗಾಗಿ ಕಲಿತ ಯುವತಿ ನೌಕರಿಯ ಹುಚ್ಚು ವ್ಯಾಮೋಹದಿಂದಾಗಿ ಅನೇಕ ವೇಳೆ ದೈಹಿಕ ಹಾಗೂ ಮಾನಸಿಕ ಹಿಂಸೆಗಳಿಗೆ ಬಲಿಯಾದ ನೂರಾರು ಉದಾಹರಣೆಗಳನ್ನು ನಾವು ಕಣ್ಣಾರೆ ಕಾಣಬಹುದಾಗಿದೆ. ಮಹಿಳೆ ಪರಿಸ್ಥಿತಿಗಳ ಪ್ರಕೋಪಕ್ಕೆ ಬಲಿಯಾಗುವುದರ ಜೊತೆಗೆ ಸಮಾಜವೂ ಕೂಡ ಇದರಿಂದ ಕೆಡಲು ಕಾರಣವಾದೀತು.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಯುವ ಜನತೆಯನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವ ವ್ಯಕ್ತಿ ಹಾಗೂ ಸಂಘ ಸಂಸ್ಥೆಗಳ ಅವಶ್ಯಕತೆ ಬಹಳವಿದೆ. ಬದುಕಲು ಸರ್ಕಾರಿ ನೌಕರಿಯೇ ಆಗಬೇಕಿಲ್ಲ' ನಾವು ಸ್ವಾಭಿಮಾನದಿಂದ ಬಾಳಲು ಸ್ವಯಂ ಉದ್ಯೋಗವೂ ಕೂಡ ನಮ್ಮ ಜೀವನದ ಸರಳ ಹಾದಿಯಾದೀತು ಎಂದು ತಿಳಿಹೇಳುವ ಪ್ರಮೇಯವಿದೆ.

ಈ ನಿಟ್ಟಿನಲ್ಲಿ ಹುಟ್ಟಿಕೊಂಡ ಸಂಸ್ಥೆಯೇ ಗ್ರಾಮಾಭಿವೃದ್ಧಿ ಮತ್ತು ಸ್ವಉದ್ಯೋಗ ತರಬೇತಿ ಸಂಸ್ಥೆಯು. 'ರೂಡ್‌ಸೆಟಿ' ಎಂತಲೂ ಇದನ್ನು ಕರೆಯುವರು. ಸಂಸ್ಥೆಯನ್ನು ಪ್ರಾರಂಭಿಸಿದವರು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ. ಡಿ. ವೀರೇಂದ್ರ ಹೆಗ್ಗಡೆಯವರು. ಇದರ ಮೂಲಭೂತವಾದ ಉದ್ದೇಶ ಯುವ ಜನರಲ್ಲಿ ಸ್ವಯಂ ಉದ್ಯೋಗದ ಬಗ್ಗೆ ಜಾಗೃತಿ, ಅರಿವು, ಕ್ರಿಯಾಶೀಲತೆ ಮೂಡಿಸುವುದು, ಮಾಹಿತಿ ಒದಗಿಸುವುದು, ಪ್ರೇರಣಾ ತರಬೇತಿ ಶಿಬಿರಗಳನ್ನು ನಡೆಸುವುದೇ ಆಗಿದೆ. ಜೊತೆಗೆ ಗ್ರಾಮಾಭಿವೃದ್ಧಿ ಚಟುವಟಿಕೆಗಳಿಗೂ ಕೂಡ ಸಂಸ್ಥೆ ಜನರನ್ನು ಪ್ರೇರೆಪಿಸುತ್ತದೆ.

ಇದರ ಪ್ರಥಮ ಶಾಖೆಯು 1982 ರಲ್ಲಿ ಧರ್ಮಸ್ಥಳದ ಬಳಿ ಇರುವ ಉಜಿರೆಯಲ್ಲಿ ಪ್ರಾರಂಭಗೊಂಡಿತು. ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಯ ಜೊತೆಗೆ ಕೆನರಾ ಬ್ಯಾಂಕು ಮತ್ತು ಸಿಂಡಿಕೇಟು ಬ್ಯಾಂಕುಗಳು ಈ ಸಂಸ್ಥೆಯ ಸಹ ಪ್ರವರ್ತಕರಾಗಿ ಕೆಲಸ ನಿರ್ವಹಿಸುತ್ತಿವೆ. ಹಾಗೂ

ಬ್ಯಾಂಕಿನಿಂದ ಸೇವಾ ಮನೋಭಾವದ ಕೆಲವು ಅಧಿಕಾರಿಗಳನ್ನು ಎರವಲು ಸೇವೆ ಮೇರೆಗೆ ನಿಯೋಜಿಸಿವೆ.

ಇಡೀ ಭಾರತಾದ್ಯಂತ ಕೇವಲ 12 ಶಾಖೆಗಳನ್ನು ಮಾತ್ರ ಈ ಸಂಸ್ಥೆ ಹೊಂದಿದ್ದು ಕರ್ನಾಟಕದಲ್ಲಿ 6 ಶಾಖೆಗಳಿವೆ. ಇದರ ಕೇಂದ್ರ ಕಛೇರಿ ಉಜಿರೆಯಲ್ಲಿದ್ದು ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಇದರ ಅಧ್ಯಕ್ಷರು.

ತರಬೇತಿಗಳು :– ಸಂಸ್ಥೆಯು ಈ ಕೆಳಕಂಡ ವಿಷಯಗಳಲ್ಲಿ ಯುವಪತಿಯರಿಗೆ ತರಬೇತಿ ನೀಡುತ್ತಿದೆ. 1) ಹೈನುಗಾರಿಕೆ 2) ಉದ್ಯಮಶೀಲತಾ ಅಭಿವೃದ್ಧಿ 3) ರೇಷ್ಮೆ ಕೃಷಿ 4) ಜಾಲರಿ ಮುದ್ರಣ 5) ಅಣಬೆ ಬೇಸಾಯ 6) ಹೊಲಿಗೆ ತರಬೇತಿ 7) ಬ್ಯೂಟಿ ಪಾರ್ಲರ್ 8) ಬೇಕರಿ ಉತ್ಪನ್ನಗಳು 9) ಸಿದ್ಧ ಉಡುಪುಗಳ ತಯಾರಿಕೆ 10) ಆಹಾರ ಮತ್ತು ಹಣ್ಣುಗಳ ಸಂಸ್ಕರಣ ಇತ್ಯಾದಿ, ಹೆಚ್ಚಿನ ಬೇಡಿಕೆ ಬಂದಲ್ಲಿ ಇತರೆ ಹೊಸ ತರಬೇತಿಗಳನ್ನೂ ಮಾಡಲು ಅವಕಾಶವಿದೆ. ತರಬೇತಿಯ ಅವಧಿ ವಿಷಯಕ್ಕನುಸಾರವಾಗಿ ಒಂದು ವಾರದಿಂದ ಒಂದು ತಿಂಗಳವರೆಗೆ ಇರುತ್ತದೆ.

ತರಬೇತಿಗೆ ಬೇಕಾದ ಅರ್ಹತೆಗಳು :– ಆಸಕ್ತರು 18 ರಿಂದ 35 ವರ್ಷ ವಯಸ್ಸಿನವರಾಗಿದ್ದು ನಿರುದ್ಯೋಗಿಯಾಗಿರಬೇಕು, ಕನಿಷ್ಠ 7ನೇ ತರಗತಿ ಪಾಸಾಗಿರಬೇಕು. ಸ್ಥಳೀಯ ಭಾಷೆಯಾದ ಕನ್ನಡ ಓದಲು ಮತ್ತು ಬರೆಯಲು ಬರುವಂತಿರಬೇಕು. ಪ್ರತಿಯೊಂದು ಸಂಸ್ಥೆಗೂ ತನ್ನದೇ ಆದ ಕಾರ್ಯವ್ಯಾಪ್ತಿಯಿದ್ದು ಅರ್ಜಿ ಸಲ್ಲಿಸಬಯಸುವವರು ಸಂಸ್ಥೆಯ ಕಾರ್ಯವ್ಯಾಪ್ತಿಗೆ ಒಳಪಟ್ಟಿರಬೇಕು.

ಕರ್ನಾಟಕದಲ್ಲಿರುವ 6 ಸಂಸ್ಥೆಗಳ ವಿಳಾಸ ಹಾಗೂ ಕಾರ್ಯವ್ಯಾಪ್ತಿ

1) ರೂಡ್‌ಸೆಟ್ ಸಂಸ್ಥೆ, ಸಿದ್ಧವನ, ಉಜಿರೆ-574240, ದಕ್ಷಿಣ ಕನ್ನಡ (ಜಿಲ್ಲೆ)	—ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬೆಳ್ತಂಗಡಿ ತಾಲ್ಲೂಕುಗಳು, ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳು.
2) ರೂಡ್‌ಸೆಟ್ ಸಂಸ್ಥೆ, ಶಿವಳ್ಳಿ ಗ್ರಾಮ-576102 ಮಣಿಪಾಲದ ಹತ್ತಿರ ಉಡುಪಿ -ತಾಲ್ಲೂಕು	—ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ, ಕುಂದಾಪುರ, ಭಟ್ಕಳ ತಾಲ್ಲೂಕುಗಳು, ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳು.
3) ರೂಡ್‌ಸೆಟ್ ಸಂಸ್ಥೆ, ವಿದ್ಯಾಗಿರಿ, ಜೆ.ಎಸ್.ಎಸ್. ಕ್ಯಾಂಪಸ್. ಧಾರವಾಡ-580004	—ಧಾರವಾಡ, ಬೆಳಗಾವಿ ಜಿಲ್ಲೆಗಳು.
4) ರೂಡ್‌ಸೆಟ್ ಸಂಸ್ಥೆ, ದೊಡ್ಡ ಉಳ್ಳರ್ತಿ ಫಾರಂ, ಅಂಚೆ ಪೆಟ್ಟಿಗೆ ನಂ. 30, ಚಳ್ಳಕೆರೆ-577522 ಚಿತ್ರದುರ್ಗ- (ಜಿಲ್ಲೆ)	—ಚಿತ್ರದುರ್ಗ, ಬಳ್ಳಾರಿ ಮತ್ತು ತುಮಕೂರು ಜಿಲ್ಲೆಗಳು.
5) ರೂಡ್‌ಸೆಟ್ ಸಂಸ್ಥೆ, ಇಬ್ರಾಹಿಂ ಗೇಟ್ ಬಳಿ, ವಿವೇಕನಗರ, ಬಿಜಾಪುರ-(ಅಂಚೆ)	—ಬಿಜಾಪುರ, ಗುಲ್ಬರ್ಗ ಹಾಗೂ ಬೀದರ್ ಜಿಲ್ಲೆಗಳು.
6) ರೂಡ್‌ಸೆಟ್ ಸಂಸ್ಥೆ, ಚಾಮುಂಡಿ ಬೆಟ್ಟದ ರಸ್ತೆ, ಕುರುಬರ ಹಳ್ಳಿ, ಮೈಸೂರು-(ಅಂಚೆ)	—ಮೈಸೂರು, ಮಂಡ್ಯ ಜಿಲ್ಲೆಗಳು.

ತರಬೇತಿಯ ರೀತಿ:– ಪ್ರತಿಯೊಂದು ತರಬೇತಿಯನ್ನು ಸಂಸ್ಥೆ ಆಯಾ ವಿಷಯದಲ್ಲಿ ಪರಿಣತಿ ಪಡೆದ ತಜ್ಞರು, ತಂತ್ರಜ್ಞರು, ವಿವಿಧ ಇಲಾಖಾ ತಜ್ಞರು, ಅತಿಥಿ ಉಪನ್ಯಾಸಕರ ಮೂಲ ನೀಡುತ್ತದೆ. ಯಶಸ್ವಿ ಸ್ವ ಉದ್ಯೋಗಿಗಳ ಪರಿಣತಿಯನ್ನು ಹಂಚಿಕೊಳ್ಳಲಾಗುವುದು.

ಸೌಲಭ್ಯಗಳು :– ಎಲ್ಲ ತರಬೇತಿಗಳನ್ನು ಸಂಸ್ಥೆ ಉಚಿತವಾಗಿ ನೀಡುವುದಲ್ಲದೆ ತರಬೇತಿಯ ಅವಧಿಯಲ್ಲಿ ಉಚಿತ ಊಟ ಹಾಗೂ ವಸತಿ ವ್ಯವಸ್ಥೆಯಿದೆ. ಅವಶ್ಯವೆನಿಸಿದಲ್ಲಿ ಒಂದು ಕಡೆಯ ಬಸ್ ಪ್ರಯಾಣ ದರವನ್ನು ನೀಡಲಾಗುವುದು. ಈ ಸಂಸ್ಥೆಯ ಒಂದು ವೈಶಿಷ್ಟ್ಯ,

ವೆಂದರೆ ತರಬೇತಿಯ ನಂತರವೂ ವಿದ್ಯಾರ್ಥಿಗಳ ಜೊತೆ ಸತತ ಸಂಪರ್ಕ ಇಟ್ಟುಕೊಳ್ಳುವುದು. ಕನಿಷ್ಠ 2 ವರ್ಷಗಳ ಕಾಲ ತರಬೇತಿ ಪಡೆದವರೊಂದಿಗೆ ಪತ್ರ ವ್ಯವಹಾರ, ಅವಲೋಕನಾ ಸಭೆಗಳು ಹಾಗೂ ವೈಯಕ್ತಿಕ ಭೆಟ್ಟಿಯ ಮುಖಾಂತರ ಸಂಪರ್ಕ ಹೊಂದಿ ಅವರ ಪ್ರಗತಿ /ಸಮಸ್ಯೆಗಳನ್ನು ಪರಿಶೀಲಿಸಲಾಗುವುದು. ಅಲ್ಲದೆ ತರಬೇತಿಯ ನಂತರವೂ ಸೂಕ್ತ ಮಾರ್ಗದರ್ಶನ, ಸಹಾಯ ಮಾಡಲಾಗುವುದು. ಬ್ಯಾಂಕಿಂಗ್ ಕುರಿತು ಕೂಡ ಮಾಹಿತಿ ಒದಗಿಸಲಾಗುವುದು.

ಅರ್ಜಿ ಸಲ್ಲಿಸುವ ಬಗೆ :– ಅರ್ಜಿ ಸಲ್ಲಿಸಲು ಯಾವುದೇ ನಿರ್ಧಿಷ್ಟ ಫಾರ್ಮುಗಳಿರುವುದಿಲ್ಲ. ಆಸಕ್ತರು ತಮ್ಮ ಹೆಸರು, ಪೂರ್ಣ ವಿಳಾಸ, ವಯಸ್ಸು, ಶಿಕ್ಷಣ, ಸದ್ಯದ ಉದ್ಯೋಗ, ಅಪೇಕ್ಷಿಸುವ ತರಬೇತಿ ಹಾಗೂ ಈ ತರಬೇತಿಯನ್ನು ಉಪಯೋಗಿಸಲು ತಮ್ಮಲ್ಲಿ ಇರುವ ಅನುಕೂಲತೆಗಳ ವಿವರಗಳನ್ನು ಬಿಳಿಯ ಹಾಳೆಯಲ್ಲಿ ಬರೆದು ಹತ್ತಿರದ ಬ್ಯಾಂಕ್ ಶಾಖೆಯ ಶಾಖಾಧಿಕಾರಿಗಳಿಂಥ ಗುರ್ತಿಸುವಿಕೆ/ಶಿಫಾರಸ್ಸು ಪಡದು ನೇರವಾಗಿ ಸಂಸ್ಥೆಯ ನಿರ್ದೇಶಕರಿಗೆ ಕಳುಹಿಸಬಹುದು, ಆಯ್ಕೆಯನ್ನು ಸಂದರ್ಶನದ ಮೂಲಕ ಕೆಲವೊಮ್ಮೆ ನೇರವಾಗಿಯೂ ಮಾಡಲಾಗುವುದು.

ಬಡತನ ಮತ್ತು ನಿರುದ್ಯೋಗವೆಂಬ ಬೃಹತ್ ಸಮಸ್ಯೆಗಳಲ್ಲಿ ಬಿದ್ದು ತೊಳಲಾಡುತ್ತಿರುವ ಯುವ ಜನತೆ ಇಂತಹ ಸಂಸ್ಥೆಗಳ ಪ್ರಯೋಜನ ಪಡೆಯಬಾರದೇಕೆ?

[ಮಹಿಳೆಯರ ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ 'ಮಾನಸ' ಪ್ರಾರಂಭಿಸಿರುವ ಮಾಲಿಕೆಗೆ ಈ ಲೇಖನ ಸೇರುತ್ತದೆ]

1994 ಸಹಜತೆಯನ್ನು ಸ್ವೀಕರಿಸುವ
ಎದೆಗಾರಿಕೆಯೊಂದಿಗೆ ಕ್ರಿಯಾಶೀಲವಾಗಿರಲೆಂದು
ಹಾರೈಸುತ್ತಾ 'ಮಾನಸ'ದ ಓದುಗರಿಗೆ
ಹೊಸ ವರ್ಷದ
ಶುಭಾಶಯಗಳನ್ನೂ ಕೋರುತ್ತೇವೆ.

ಸಂ. ಮಂ.

ಉಪಸಂಸ್ಕೃತಿಯ ಅಧ್ಯಯನ ದುರುಗ ಮುರಗಿಯರ ಸಂಸ್ಕೃತಿ

ಪ್ರಕಾಶಕರು : ಕರ್ನಾಟಕ ಸಾಹಿತ್ಯ ಅಕಾಡೆಮಿ 1993

ಸಂಗ್ರಹ : **ಎಚ್. ಎಸ್. ರಾಜೇಶ್ವರಿ**

ಕರ್ನಾಟಕದಲ್ಲಿ ಸುಮಾರು ಅರವತ್ತೈದಕ್ಕೂ ಹೆಚ್ಚಿನ ಬುಡಕಟ್ಟಿನ ಜನರು ವಾಸವಾಗಿರುವುದು ಕಂಡುಬರುತ್ತದೆ. ಬುಡಕಟ್ಟಿನ ಜನಾಂಗದ ಮಂದಿ ಅಲೆಮಾರಿಗಳಾದರೂ ಕರ್ನಾಟಕದ ನೆಲದಲ್ಲಿ ಅಲ್ಲಲ್ಲಿ ಅಷ್ಟಿಷ್ಟು ಹೊತ್ತು ವಸ್ತಿ ಹಾಕಿ, ಸಮಯ ಸವೆಯಿಸಿ ಮುಂದಿನ ಸ್ಥಳಕ್ಕಾಗಿ ಆ ಜಾಗ ಖಾಲಿ ಮಾಡುತ್ತಿರುತ್ತಾರೆ. ಅನ್ನ ನೀರು ಹುಡುಕಿಕೊಂಡು ಅಲೆಯುವ ಮಂದಿಯಲ್ಲಿ 'ದುರುಗ ಮುರಗಿ'ಯರದು ಒಂದು ಪಂಗಡ.

ಮೂಲತಃ ಅಲೆಮಾರಿಗಳಾದ ಈ ಮಂದಿ ಯಾವುದೇ ಹಳ್ಳಿಯ ಒಳಗಡೆ ವಾಸಿಸುವುದಿಲ್ಲ. ಊರ ಹೊರಗಡೆಯ ಜೈಲಿನಲ್ಲಿಯೇ ಇವರ ವಾಸ. ಅಡವಿಯಲ್ಲಿಯೂ ಅಲ್ಲಲ್ಲಿ ಇವರು ಗುಡಿಸಲುಗಳನ್ನು ಹಾಕಿಕೊಂಡಿರುತ್ತಾರೆ. ಮೂಲತಃ ಅಲೆಮಾರಿ ಜನಾಂಗದವರಾದ ಇವರು ಮಳೆಗಾಲದಲ್ಲಿ ಮಾತ್ರ ಒಂದೆಡೆ ನಿಲ್ಲುತ್ತಾರೆ. ಇವತ್ತು ಈ ಹಳ್ಳಿಯಾದರೆ, ನಾಳೆ ಮತ್ತೊಂದು ಹಳ್ಳಿ. ಹೀಗೆ ಇವರು ಸಂಚಾರಿ ಭಿಕ್ಷುಕರು.

ಹರೆಯದವರು ಊರಲ್ಲಿ ಮುಖವಾಡ ಧರಿಸಿ, ವೇಷ ಕಟ್ಟಿ ಕುಣಿಯಲು "ಪೋತುರಾಜ"ರಾಗಿ ಹೊರಡುತ್ತಾರೆ. ಅವರ ಹೆಂಡಿರು ಬುರುಬುರು ವಾದ್ಯ (ಡೋಲು) ಬಾರಿಸುತ್ತಾ ನಿಲ್ಲುತ್ತಾರೆ. ಬಾಲಕರು ಕುಣಿಯುತ್ತಾ ಆಗಲೇ ಕುಣಿತದ ಲಡ್ನು ಹೊಡದುಕೊಳ್ಳುವ ಆರ್ಭಟಿಸುವ ತರಬೇತಿಯನ್ನು ಪಡೆಯುತ್ತಿರುತ್ತಾರೆ. ಸಣ್ಣ ಪುಟ್ಟ ಮಕ್ಕಳು ಆಯಿಮುತ್ತ್ಯಾ ಅವರ ಹತ್ತಿರ ಗುಡಿಸಲಲ್ಲೇ ಇರುತ್ತವೆ. ಕೆಲವು ಸಲ ಎಳೆಗೂಸುಗಳನ್ನು ತಾಯಿ ಬಟ್ಟೆಯ ಜೋಳಿಗಿಯಲ್ಲಿ ಮಲಗಿಸಿಕೊಂಡು ಹೆಗಲಿಗೆ ನೇತು ಹಾಕಿಕೊಂಡೇ ಬುರು ಬುರು ವಾದ್ಯ ಬಾರಿಸುತ್ತಿರುತ್ತಾಳೆ.

'ದುರುಗ ಮುರಗಿ'ಯವರೆಂದರೆ ದುರ್ಗಮ್ಮ, ಮುರುಗಮ್ಮನ ಆರಾಧಕರು. ಇಲ್ಲಿ ದುರುಗ ಅಂದರೆ ದುರ್ಗಾದೇವಿ ಮತ್ತು ಮುರಗಮ್ಮ ಅಂದರೆ ಪಾರ್ವತಿ ಎಂದು ಅರ್ಥೈಸಬಹುದು. ಇವೆರಡು ಪದಗಳ ಅರ್ಥ ಶಕ್ತಿ ದೇವತೆಯಾದ ಪಾರ್ವತಿ ಎಂದೇ ಆಗುತ್ತದೆ ಡಾ || ಚಂದ್ರಶೇಖರ ಕಂಬಾರರು ಹೇಳುವಂತೆ ಈ ಜನಾಂಗದ ಅಧಿದೇವತೆಯಾಗಿರುವ ದುರಗಮ್ಮ ಪಾರ್ವತಿ ದೇವಿಯ ಅಂಶವೆಂಬುದನ್ನು ಈ ಜನಾಂಗದವರೇ ಒಪ್ಪಿಕೊಳ್ಳುತ್ತಾರೆ. ಅಲ್ಲದೆ, ತಮ್ಮ ದೇವತೆ ಆದಿಶಕ್ತಿಯ ಅವತಾರ ಅಂಬೋದು ಅವರ ಗಟ್ಟಿ ನಂಬಿಕೆ.

ಒಂದು ಕಾಲದಲ್ಲಿ ಈ ಜನರಿಗೆ ಸಮಾಜದಲ್ಲಿ ಒಂದು ಒಳ್ಳೆಯ ಭಾವನೆಯಿದ್ದಿರಬಹುದು. ಊರಲ್ಲಿ ಮುರಗಮ್ಮನ ಗುಡಿ ಹೊತ್ತುಕೊಂಡು ಬಂದು, ಪ್ರಮುಖ ಸ್ಥಳದಲ್ಲಿ ಅವನ್ನಿಳಿಸಿ ಆಟ ಕಟ್ಟುತ್ತಿದ್ದರು. ಗಂಡಸು 'ಪೋತುರಾಜ' ನಾಗಿ ಆರ್ಭಟಿಸುತ್ತ, ಕುಣಿಯುತ್ತಾ ಮೈಗೆ ಲಡ್ನು ಹೊಡೆದುಕೊಳ್ಳುತ್ತಾ ಓಡಾಡುತ್ತಿದ್ದರೆ ಹೆಂಡತಿ ಬುರು ಬುರು ವಾದ್ಯ ನುಡಿಸುತ್ತಿದ್ದಳು.

ಹೆಂಗಸೂ ಸಹ ಕೆಲವುಸಲ ಒಬ್ಬಂಟಿಯಾಗಿ ಭಿಕ್ಷೆಬೇಡಿ ಆಹಾರ ಸಂಗ್ರಹಿಸಲು ಹೋಗುತ್ತಾಳೆ. ಆದರೆ ಅವಳು ಹೆಚ್ಚಾಗಿ ಬಜಾರಿಗೆ ಬರುವುದಿಲ್ಲ. ನಗರದಲ್ಲಿ ಗಲ್ಲಿ ಗಲ್ಲಿ ಓಣಿಗಳಲ್ಲಿ ಸುತ್ತುತ್ತಾ ಪ್ರತಿಯೊಂದು ಮನೆಯ ಮುಂದೆಯೂ ನಿಂತು ತನ್ನ ಕುತ್ತಿಗೆಗೆ ನೇತು ಹಾಕಿಕೊಂಡಿರುವ ಬುರುಬುರು ವಾದ್ಯವನ್ನು ಕಿವಿಗಡಚಿಕ್ಕುವಂತೆ ಬಾರಿಸುತ್ತಾ ಭಿಕ್ಷೆಗಾಗಿ ಗೋಗರೆಯುತ್ತಾಳೆ. ಇವಳನ್ನು ಬುರುಬುರು ಪೋಚಮ್ಮ ಎಂದೇ ಕರೆಯುತ್ತಾರೆ.

ಕೊರಳಲ್ಲಿ ಬುರುಬುರು ವಾದ್ಯವಿರುತ್ತದೆ. ಹೆಗಲಿಗೆ ಜೋಳಿಗೆ, ಕೆಲವು ಸಲ ಹಸುಗೂಸನ್ನೂ ಪ್ರತ್ಯೇಕ ಜೋಳಿಗೆಯಲ್ಲಿ ಮಲಗಿಸಿಕೊಂಡು ಹೆಗಲಿಗೆ ನೇತು ಹಾಕಿಕೊಂಡಿರುತ್ತಾಳೆ. ಅದು ಸರಿಯಾಗಿ ಅವಳ ಮಗ್ಗುಲಿಗಿರುತ್ತದೆ. ಮಗು ಅತ್ತರೆ ಮೊಲೆ ತೆಗೆದು ಅದರ ಬಾಯಿಗೆ ತುರುಕಲು ಅನುವಾಗಿರುತ್ತದೆ. ಈ ಜನಾಂಗದಲ್ಲಿ ಹೆಚ್ಚಾಗಿ ಬೇಡಿಕೊಳ್ಳುವ ಕೆಲಸ ಹೆಂಗಸರದು. ಗಂಡಸರು ಹಂದಿ, ಕುರಿಗಳನ್ನೂ ಸಾಕುತ್ತಾ ಅವುಗಳ ಕೂದಲು, ಗೊಬ್ಬರ ಮಾರುತ್ತಾ ಇರುತ್ತಾರೆ. ಬೇಡಿ

ಕೊಂಡು ತಂದು ಹಾಕಲೆಂದೇ ಕೆಲವು ಸಲ ಕೆಲವು ಗಂಡುಗಳು ಮೂರುನಾಲ್ಕು ಹೆಂಡತಿಯರನ್ನು ಮದುವೆ ಮಾಡಿಕೊಂಡಿರುತ್ತಾರೆ.

ಅಂತೆಯೇ ದುರಗ ಮುರಗಿಯುವರ ಪರಂಪರೆ, ರೀತಿ, ರಿವಾಜುಗಳು ಸುಸಂಸ್ಕೃತಿಗಳನ್ನು ಅವರ ದಿನ ನಿತ್ಯದ ಹಾಡುಗಳಲ್ಲಡಗಿದ ಸಾಹಿತ್ಯದಲ್ಲಿ ಕಾಣಬಹುದು. ಸುಖ ದುಃಖದ, ಅಳುವ ನಗುವಿನ ನಡುವಿನ ಕಾಲದಲ್ಲಿ ಕಥೆ, ಹಾಡು, ಗಾದೆ, ಒಗಟು, ಮೊದಲಾದ ಸಾಹಿತ್ಯದ ಹಲವು ಪಳಕು ಸಹಜವಾಗಿ ಹುಟ್ಟಿ ಬೆಳೆಯುತ್ತವೆ.

ಬರೆದವರು ಯಾರೋ, ಹೆಸರಿಲ್ಲದ, ಹೆಸರೊಲ್ಲದ ಹಲವಾರು ಅಜ್ಞಾತ ಕವಯಿತ್ರಿಯರು. ಇವೆಲ್ಲ ಕವಿತೆಗಳು ಅನ್ನುವ ಅರಿವು ಅವರಿಗಿರಲಿಕ್ಕಿಲ್ಲ. ಹಾಗಂತ ಇವುಗಳನ್ನು ಯಾರೂ ಬರೆದಿಟ್ಟಿಲ್ಲ. ಹಾಗೆ ಬರೆದಿಡಲು ಅಕ್ಷರ ಜ್ಞಾನವಿದ್ದರೆ ತಾನೆ ?

ಮಗಳು ಮೈ ನೆರೆದರೆ, ಮದುವೆ ಮಾಡಿದರೆ, ಸೋಬಾನ ಮಾಡಿದರೆ—ಎಲ್ಲ 'ಚಾಜ'ಗಳಲ್ಲಿ ಇವರು ಹಾಡುತ್ತಾರೆ. ಮಗಳು ಮೈನೆರೆದು ಬಾಗಿಲಲ್ಲಿ ಬಂದು ನಿಂತರೆ ತಪ್ಪಿನ ಅರಿವಾಗುತ್ತದೆ.

ರಂಭಿ ತಾ ಮೈನೆರೆದು ಬಾಗಿಲದಾಗ ನಿಂತಾಳೆ
ನಿಂಬಿ ಹಣ್ಣಿನ್ಹಂಗೆ ಮಕ ಬಾಡೇ ! ಅವರವ್ವ
ಬಾ ರಂಬಿ ಅಂತ ಕರದಾಳೆ ॥

ಮೈ ನೆರೆದ ಹೆಣ್ಣಿನ ಮಾರಿ ನಿಂಬೆ ಹಣ್ಣಿನಂತೆ ಬಾಡಿದ್ದು "ಹೆತ್ತ ಕರುಳಿಗೆ ಗೋಚರಿಸುತ್ತದೆ. ಹಣ್ಣಿಗೂ ಹೆಣ್ಣಿಗೂ ಇಲ್ಲಿ ಅನ್ಯೋನ್ಯ ಹೋಲಿಕೆಯಿದೆ. ಗಂಡನ ಮನೆಗೆ ಗಂಧ ತೊಡೆಯಲು ಅದನ್ನು ಸೋಸುತ್ತಾ ಕುಳಿತ ಹೆಂಡತಿ ನಯವಾಗಿಯೇ ಗಂಡನಿಗೆ ಹೇಳುತ್ತಾಳೆ. ಪುರುಷ ನಮ್ಮಪ್ಪಗೆ ಬಯ್ಯಬಾಡರಿ, ನಮ್ಮವ್ವಗೆ ಬಯ್ಯೇ ಬಾಡರೀ." ಹೊಸದಾಗಿ ಮದುವೆಯಾಗಿ ಗಂಡನ ಮನೆಗೆ ಬಂದ ಹೆಣ್ಣು, ತನ್ನ ತಾಯಿ, ತಂದೆಯರ ಬಗ್ಗೆ ಗಂಡನು ಗೌರವದಿಂದ ನಡೆದುಕೊಳ್ಳಲಿ ಎನ್ನುವ ಬಯಕೆ ಹೀಗೆ ಕೇಳಿದ್ದಿರಬಹುದು. ಅದಕ್ಕೆ ಗಂಡನು ಹೇಳುವುದು

ನಿಮ್ಮಪ್ಪ ತಿಮ್ಮಪ್ಪಗ ನಾಯಾಕೆ ಬೈಯ್ಯಲಿ
ನಮ್ಮಪ್ಪಗಂಜಿ, ನನಗಂಜಿ ನಡೆದರೆ, ನಿನಗ
ಬಂಗಾರ ಬಾ ಅಂತ ಕರದೇನೇ....

ಹೆಣ್ಣನ್ನು ಹೆತ್ತವರು ಅಳಿಯನಿಗೆ, ಅಳಿಯನ ಅವ್ವ ಅಪ್ಪಂದಿರಿಗೆ ಹೆದರಿ ನಡೆದರೆ ಮಾತ್ರ ಅವರು ತಮ್ಮ ಮಗಳನ್ನು ಸುಖವಾಗಿಟ್ಟುಕೊಳ್ಳುತ್ತಾರೆ ಎಂಬ ಅರ್ಥವನ್ನಿಲ್ಲಿ ಕಾಣುತ್ತೇವೆ. ಗಂಡನ ಅಹಂಭಾವ- ಇದು ಸಾಮಾನ್ಯ ಜನರಲ್ಲಿಯೂ, ಹಿಂದಿನಿಂದಲೂ ನಡೆದು ಬಂದದ್ದು ಎಂಬುದನ್ನು ಈ ಹಾಡು ಸಾಬೀತು ಪಡಿಸುತ್ತದೆ. ಹೆಣ್ಣಿನ ಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತದೆ. ಹೆಣ್ಣಿನ ದಾಸ್ಯ ಬಾಳಿನ ನವಿರಾದ ಲೇಪ ಇಲ್ಲಿ ಕಂಡುಬರುತ್ತದೆ. ಮದುವೆಯಾಗಿ ಬಂದ ಹೆಣ್ಣು ಅತ್ತೆ ಮಾವ ಮತ್ತು ಗಂಡನಿಗೆ ಅಂಜಿ ನಡೆಯಬೇಕು ಎನ್ನುವ ಮಾತು ಮೊದಲಿನಿಂದಲೂ ನಮ್ಮ ಈ ಪುರುಷ ಪ್ರಧಾನ ಸಮಾಜದಲ್ಲಿ ನಡೆದು ಬಂದಿದೆ. ಆದರೆ ಹೆಣ್ಣಿನ ತಾಯಿ, ತಂದೆಯರೂ ಸಹ ಮಗಳ ಅತ್ತೆ-ಮಾವಂದಿರಿಗೆ ಅಳಿಯನಿಗೆ ಹೆದರಿ ನಡೆಯಬೇಕು. ಅಂದಾಗ ಮಾತ್ರ ಅವರ ಮಗಳನ್ನು ಗಂಡನಾದವನು ತನ್ನ ಮನೆಯಲ್ಲಿ ಚೆನ್ನಾಗಿ ಬಾಳಿಸುತ್ತಾನೆ ಎಂಬುದನ್ನೇ ಪದ್ಯದ ಕೊನೆಯ ಸಾಲುಗಳು ಸಾರುತ್ತವೆ.

ಮದುವೆಯ ಹೆಣ್ಣಿನ ಹೆತ್ತವರಿಗೆ ಗಂಡಿನ ಕಡೆಯವರು ತೆರು (ಕನ್ಯಾದಕ್ಷಿಣೆ) ಕೊಡುವ ಪದ್ಧತಿ ಇದೆ. ಮೊದಲೆಲ್ಲಾ ಹದಿನಾರು ಬೆಳ್ಳಿ ರೂಪಾಯಿಗಳನ್ನು 'ತೆರು'ವೆಂದು ಕೊಡುತ್ತಿದ್ದರು. ನಂತರ ಅದು 25/ರೂಗಳಿಗೇರಿತು. ಈಗ ಐವತ್ತೊಂದು ರೂಪಾಯಿಗಳನ್ನು ಕೊಡುತ್ತಾರೆ.

ಹೆಣ್ಣಿನ ಬಾಳಿನ ಪ್ರಮುಖ ಘಟ್ಟಗಳಲ್ಲಿ ತಾಯಿಯಾಗುವುದೂ ಒಂದು. ಹೆಣ್ಣಿನ ಬದುಕು ಸಾರ್ಥಕವಾಗಬೇಕಾದರೆ, ಅವಳು ತಾಯಿಯಾಗಿ ಮತ್ತೊಂದು ಜೀವಕ್ಕೆ ಜನ್ಮ ಕೊಟ್ಟಾಗ, ಎನ್ನುವ ತತ್ವ ದುರಗ ಮುರಗಿಯದು. ಬಂಜೆ ಹೆಣ್ಣು ಇಲ್ಲಿ ಸಮಾಜದ ಅನಾದರಕ್ಕೆ ಗುರಿಯಾಗುತ್ತಾಳೆ. ಬಂಜೆ ತನ ಅದೊಂದು ಕೊರತೆ ಎಂದೇ ಜನರು ತಿಳಿಯುತ್ತಾರೆ.

ಶಕ್ತಿ ಪೂಜೆಯೇ ಇದರ ಧ್ಯೇಯವಾಗಿದ್ದರೂ ದೇವಿಯ ಆರಾಧಕರು ಇವರಾಗಿದ್ದರೂ ಈ ಜನಾಂಗ ಪಿತೃಪ್ರಧಾನವಾದದ್ದು. ಕುಟುಂಬದಲ್ಲಿ ತಂದೆಯದೇ ಅಧಿಕಾರ ದರ್ಪ ಆಡಳಿತ. ತಾಯಿಗೆ ಯಾವಾಗಲೂ ಎರಡನೆಯ ಸ್ಥಾನ. ಒಬ್ಬನಿಗೆ ಮಕ್ಕಳಾಗದಿದ್ದರೆ ಅದಕ್ಕೆ ಅವನ ಹೆಂಡತಿಯನ್ನೇ ಸಂಪೂರ್ಣ ಹೊಣೆಗಾರಳನ್ನಾಗಿಸುತ್ತಾರೆ. ಮತ್ತೊಂದು ಹೆಣ್ಣನ್ನ ಮದುವೆಯಾಗುತ್ತಾನೆ. ಅವನು ಮಕ್ಕಳಾಗದಿರುವುದಕ್ಕೆ ಗಂಡನ ಬಳಿಯೂ ಕೊರತೆ ಅಥವಾ ದೋಷ ಇರಬಹುದು ಎಂಬ ಕಲ್ಪನೆಯನ್ನು ಸಹ ಇವರು ಮಾಡುವುದಿಲ್ಲ. ಹೆಣ್ಣಿನ ಮೇಲೆ ದಬ್ಬಾಳಿಕೆ, ದೌರ್ಜನ್ಯಗಳು ಈ ಜನಾಂಗದಲ್ಲಿಯೂ ಇವೆ.

ಹೆಜ್ಜೆಗಳು

ತಾರಾರಾವ್

ದಟ್ಟವಾದ ಕತ್ತಲಿನೊಡನೇ, ಜೀರುಂಡೆಯ ಶಬ್ದದಲ್ಲಿ, ಆಕಾಶದಲ್ಲಿ ತಮ್ಮದೆ ಪ್ರಕಾಶ ಬೀರುವ ನಕ್ಷತ್ರಗಳ ಲೋಕವನ್ನು ನಿಟ್ಟಿಸುತ್ತಾ : ಒಂದು ಕ್ಷಣ ನನ್ನನ್ನೇ ಮರೆಸಿ, ನೀಳವಾದ ನಿಟ್ಟುಸಿರು ಹೊರಬರುತ್ತದೆ. ದೀಪಾವಳಿ ಮುಗಿದೇ ಹೋಯಿತು. ಆದರೂ ಪಟಾಕಿಗಳ ಸದ್ದು, ಕೇಳಿಸುತ್ತಲೇ ಇದೆ. ಮನೆಗಳ ಮುಂಭಾಗದಲ್ಲಿ ಗೂಡು ದೀಪಗಳ ಸಾಲು, ಎಣ್ಣೆ ಹಾಕಿ ಬತ್ತಿ ಹಚ್ಚಿದ ಹಣತೆಗಳ ನಂದಾ ದೀಪಗಳು ಎಲ್ಲರ ಮನೆಗಳಲ್ಲು ಹೊಳೆಯುತ್ತಿವೆ. ಮನದ ಕತ್ತಲು ಹರಿಸಿ, ಜ್ಞಾನದ ಅರಿವಿನ ದೀಪ ಬೆಳಗಾಗಬೇಕಾಗಿದ್ದು ಆಗದೇ ಕೇವಲ ಸಂಕೇತವಾಗಿ ಉರಿಯುತ್ತಿದೆ.

ನೆನಪು ಹಸಿಯಾಗಿ ಕಾಡಿದೆ, ಹೃದಯ ನರಳುತ್ತಿದೆ. ಆದರೆ ? ಆಕೆ ಮಾತ್ರ ಎಲ್ಲೋ ದೂರದ ಪುಟ್ಟ ಮನೆಯ ನಾಲ್ಕು ಗೋಡೆಗಳ ನಡುವೆ, ಮುದುಡಿದ ಮನದೊಡನೇ, ಮಿಣುಕು ದೀಪದಲ್ಲಿ, ಏನೋ ಒದರುತ್ತಿರುವ ರೇಡಿಯೋ ಸದ್ದಿನೊಳಗೆ, ತನ್ನನ್ನ ತಾ ಬಗ್ಗಿಸಿಕೊಂಡು, ಕಣ್ಣಾಲಿಗಳ ನಡುವೆ ಹರಿಯಲು ಸಿದ್ಧವಾಗಿರುವ ಗಂಗೆಯನ್ನ ಒರೆಸಿಕೊಳ್ಳುವ ನೆವದಲ್ಲಿ ತಲೆ ತಗ್ಗಿಸಿ, ಮಂಡಿಗೆಯಲ್ಲಿ ತಲೆಯಿಟ್ಟು, ತಾನು ಒಬ್ಬ ಮನುಷ್ಯಳು, ಎಂಬುದನ್ನೇ ಮರೆಸಲು ಪ್ರಯತ್ನಿಸುವ ದೃಶ್ಯ ಕಣ್ಣಿಗೆ ಕಟ್ಟಿದಂತಾಗುತ್ತದೆ.

ಈಗ ಆಕೆಗೆ ನಲ್ವತ್ತು ವರ್ಷಗಳಾಗುತ್ತಿದೆ. ಹುಟ್ಟಿದ್ದು ಬಡ ಕುಟುಂಬದಲ್ಲಿ. ವಿಧ್ಯಾಭ್ಯಾಸ ಕೂಡ ಪ್ರಾಥಮಿಕ ಶಾಲೆಗೆ ಕೊನೆಯ್ತಾಯಿತು. ಬಡತನ ಹೊಟ್ಟೆ ಪಾಡು, ತಮ್ಮ ಐದು ಜನರ ಕುಟುಂಬದಲ್ಲಿ ತಂದೆ ಇದ್ದು ಇಲ್ಲದಂತಾದ ಅನಾಥ ಸ್ಥಿತಿ. ತಾಯಿ ಕೂಲಿ ಕೆಲಸ ಮಾಡಿ ಸಾಕಿದಳು, ಇವಳು ಬೆಳೆದಳು. ಬದುಕಲು ಆಧಾರವಾಗಿ ಖಾಸಗಿಯ ಸಂಸ್ಥೆಯಲ್ಲಿ ಆಯಾ ಆಗಿ ಸೇರಿದಳು.

ಬಡತನದ, ಅನುಭವ ನನಗೆ ಆಗದಿದ್ದರೂ ಆಕೆಯ ಮಾತುಗಳು, ನನ್ನ ಬೆಚ್ಚಿ ಬೀಳಿಸುತ್ತಿತ್ತು. ಮೂಕಳನ್ನಾಗಿಸುತ್ತಿತ್ತು. ಬದುಕು ಹೀಗೆಯೇ ಸಾಗಿತ್ತು. ಹೊಟ್ಟೆ. ಬಟ್ಟೆ ಕಟ್ಟೆ, ಮಿತವಾದ ಆಸೆಗಳೊಡನೇ ಆಕೆ ಬದುಕುತ್ತಿದ್ದಳು. ತಾಯಿ ನಾಲ್ಕು ಮನೆಗಳ ಕೆಲಸ ಮಾಡುತ್ತಿದ್ದರೂ ಎಂದೂ ಮನ ನೋಯಿಸಿದವಳಲ್ಲ. ತಂದೆಯ ಹೇಡಿತನ, ತಿರಸ್ಕಾರ, ಇಷ್ಟವಿಲ್ಲದ ವರ್ತನೆಯಿಂದ ಬೇಸತ್ತು, ಮಕ್ಕಳನ್ನ ಹೊರಡಿಸಿಕೊಂಡು ಬಂದು ಪೇಟೆಯಲ್ಲಿ ಮನೆ ಮಾಡಿದ್ದಳು. ಆಗನಿಂದ ಒಂದು ರೀತಿಯ ನಿರ್ಲಿಪ್ತತೆ, ಆಕೆಯನ್ನ ಅವರಿಸಿದ್ದರೂ ಕರ್ತವ್ಯ ಲೋಪ ಎಣಿಸಿರಲಿಲ್ಲ. ಎರಡು ಗಂಡು, ಎರಡು ಹೆಣ್ಣು ಮಕ್ಕಳಿಗೂ ಪರಿಸ್ಥಿತಿಯ ಅರಿವಾದಂತೆಲ್ಲ ತಾಯಿಯನ್ನ ಅರ್ಥ ಮಾಡಿ ಕೊಳ್ಳತೊಡಗಿದರು.

ಗಂಡನನ್ನು ಬಿಟ್ಟು ಬಂದವಳು ಎಂಬ ಕಾರಣದಿಂದಾಗಿ ತಾಯಿಯನ್ನ ಬಂಧು, ಬಾಂದವರು ತಿರಸ್ಕರಿಸಿದರು, ಆಡಿಕೊಂಡರು, ದೂರ ಮಾಡಿದರು. ಭಂಡ ಗಂಡಸರು, ಊರಲ್ಲಿ ಸಂಪನ್ನರು, ಗುಣವಂತರು ಸಜ್ಜನರು ಎಂದೆನ್ನಿಸಿಕೊಂಡವರೂ ಒಮ್ಮೆ ಪ್ರಯತ್ನಿಸಬಾರದೇಕೆ ಎಂಬ ಭಾವನೆಯಿಂದ ಬಂದು,ಬಗ್ಗದಾದಾಗ ಈಕೆಗೆ ಹೆಸರನ್ನಿಟ್ಟವರು. ಇದಾವುದನ್ನ ಲೆಕ್ಕಿಸದೇ ಆಕೆ 'ಮಾನವಂತಳಾಗಿ', 'ಶೀಲವಂತಳಾಗಿ' ಉಳಿದು, ಮಕ್ಕಳನ್ನ ಕೂಡ ಸಂಸ್ಕಾರವಂತರನ್ನಾಗಿಸಿದಳು.

ಮಗಳಿಗೆ ಪ್ರಾಪ್ತ ವಯಸ್ಸಾಯಿತು. ವರ ಸಿಗಲೇ ಇಲ್ಲ. ಗಂಡು ಮಗ ಸರ್ಕಾರಿ ಕೆಲಸ ಸಿಕ್ಕಿ, ದೂರದ ಊರಿಗೆ ಹೋದವನು ಅತ್ತ ಕಡೆಯೇ ಶ್ರೀಮಂತರ ಮನೆ ಹುಡುಗಿಯನ್ನು ಮದುವೆಯಾಗಿ ತಾನು ತನ್ನದು,ಮಾತ್ರ ಬಾಳತೊಡಗಿದ. ಮತ್ತೊಬ್ಬ ಮಗ, ಖಾಸಗಿ ಕೆಲಸದಲ್ಲಿದ್ದು ತಾಯಿಗೆ ಆಗಾಗ ಹಣ ಕಳಿಸುತ್ತಿದ್ದ. ಉಳಿದವಳು ಕೊನೆಯ ಮಗಳು. ಆಕೆ ಎಸ್. ಎಸ್. ಎಲ್.ಸಿ ಓದಿ, ಖಾಸಗಿಯಲ್ಲಿ ಕೆಲಸಕ್ಕೆ ಸೇರಿದ್ದಳು. ಈಕೆ, ದುಡಿದು, ತಾಯಿ ತಂಗಿಯನ್ನ ಸಾಕುವ ಪರಿಸ್ಥಿತಿ ಬಂದರೂ, ಹೆದರದೇ ನಿಭಾಯಿಸುತ್ತಿದ್ದಳು.

ವಯಸ್ಸು ಕಳೆಯುತ್ತಾ ಬಂತು. ತಾಯಿ ತಮ್ಮ ಮದುವೆಗಾಗಿ ಪ್ರಯತ್ನಿಸಿದಾಗೆಲ್ಲ, ತಾಯಿಗೆ ಕಟ್ಟಿದ ಹಣೆ ಪಟ್ಟಿಯಿಂದಾಗಿ, ಹಚ್ಚಿ ಕೊಡುವವರ ಕಲುಷಿತ

ಸ್ವಭಾವದಿಂದಾಗಿ, ಮದುವೆ, ಮುಂದೂಡುತ್ತಾ ಹೋದಂತೆ ಈಕೆ ಮೌನವಾಗತೊಡಗಿದಳು.

ಅತ್ತ ಹಳ್ಳಿಯು ಅಲ್ಲದ ಇತ್ತ ಪಟ್ಟಣವೂ ಅಲ್ಲದ ಊರಿನಲ್ಲಿ ಇವರು ವಾಸವಾಗಿದ್ದು, ಕಲಿಕೆಗೆ ಅಗಲಿ, ಬೇರಾವ ರೀತಿಯಲ್ಲೆ, ಅಗಲಿ, ಜೀವನಕ್ಕೆ ಬೇಕಾದ ವಿದ್ಯೆಯನ್ನ ಕಲಿಯಲು ಅವಕಾಶವಿರಲಿಲ್ಲ. ಹತ್ತಿರ ಯಾವ ಸ್ಥಳವು ಇರಲಿಲ್ಲ. ಸರ್ಕಾರಿ ಕಾರ್ಯಕ್ರಮಗಳು ಕೂಡ ಇಂತಾ ಸ್ಥಳಗಳಿಗೆ ತಲುಪ್ರವುದು ಕಠಿಣವೇ. ಈ ಎಲ್ಲ ಕಾರಣಗಳಿಂದಾಗಿ ಇವರು ನೆಲಸಿದ ಊರು ಪ್ರಶಾಂತವಾಗಿತ್ತು.

ಬಡವರಿಗೆ ಕನಸುಗಳೇ ಚಂದ. ಹಾಗೆಯೇ ಈಕೆಗೂ ಕೂಡ ಮದುವೆಯ ಬಗ್ಗೆ ಕನಸು ಕಾಡತೊಡಗಿತ್ತು. ಮದುವೆ ಆಗಬಯಸುವ ಗಂಡಿಗೆ, ರೂಪ ಇಲ್ಲದಿದ್ದರೂ, ಹಣ ಇರಬೇಕು. ಹಣದ ಮುಂದೆ, ಎಲ್ಲವೂ ಘುಚ್ಚಿ ಹೋಗುತ್ತದೆ. ಲಕ್ಷಣವಾಗಿ, ತೆಳ್ಳಗೆ ಬೆಳ್ಳಗೆ ಗುಂಡು ಮುಖದ ಇವಳನ್ನ ನೋಡಿದವರು ಹಣ ಇಲ್ಲದಿರುವ ಕಾರಣ ನಕಾರ ಸೂಚಿಸುತ್ತಿದ್ದರು. ಎಂತ ಎಂತಹವರಿಗೋ ಈಕೆಯ ಮುಂದೆಯೇ ಮದುವೆ ಆಗ ತೊಡಗಿದಾಗ, ಮನಸು ಒಂಟಿಯಾಗಿ ನರಳತೊಡಗಿತು. ಬದುಕು ಅರ್ಥವಿಲ್ಲದ್ದು, ಎಂದು ಎಷ್ಟೋ ಬಾರಿ ಅನ್ನಿಸಿದಾಗೆಲ್ಲ, ತಾಯಿ ಮುಖ ಎದುರಿಗೆ ಬಂದು ಜೀವಿಸುವ ಆಸೆ, ಹುಟ್ಟುತ್ತಿತ್ತು.

ಅಂತೂ ಇಂತೂ ಕೊನೆಗೊಬ್ಬ ಗಂಡು ಬಂದ. ಮಧ್ಯಮ ವಯಸ್ಸಿನ ಈತನ ಮುಖ ಸಭ್ಯತೆಯದಾಗಿತ್ತು. ಮುಗ್ಧ ಮುಖದಿಂದ ಕೂಡಿದ್ದು, ಒಳ್ಳೆಯ ಭಾವನೆಯನ್ನ ಹುಟ್ಟಿಸುತ್ತಿತ್ತು. ಮದುವೆ ಎಂಬ ಪದವೇ ಖುಷಿ ಕೊಡುವ ಸಂಭ್ರಮದಲ್ಲಿ,ಆಲೋಚನೆಗೂ ದುರಾಲೋಚನೆಗೂ ಅವಕಾಶವೇ ಇರಲಿಲ್ಲ. ಮದುವೆ ಮುಗಿಯಿತು. ವರದಕ್ಷಿಣೆ ಪಡೆದು ತಾಳಿ ಕಟ್ಟಿದವನು, ಆರು ತಿಂಗಳು, ವರ್ಷ ಚೆನ್ನಾಗಿಯೇ ನೋಡಿಕೊಂಡ.

ಇಬ್ಬರನ್ನು ಮದುವೆ ಆದ ಆತನನ್ನು ಮೊದಲನೆಯವಳು, ಇವನ ವಿಕೃತ ಮನಸ್ಸು, ಸಂಶಯದ ಪ್ರವೃತ್ತಿ ಸದಾ ಮಾನಸಿಕ ಹಿಂಸೆಯನ್ನು ನೀಡುತ್ತಾ, ಹೆಂಡತಿಯನ್ನು ಹೆಂಡತಿಯನ್ನಾಗಿ ನೋಡದೇ, ಗೌರವಿಸದೇ ಇರುವ ಆತನ ಕ್ರೂರ ಮಾತಿನ ಹೊಡೆತ, ತಾಳಲಾಗದೇ ತವರು ಮನೆಗೆ ಬಂದು ವಿಚ್ಛೇದನ ತೆಗೆದುಕೊಂಡಳು. ಆಗ ಈತ ಅಂದದ್ದು ತನ್ನ ಹೆಂಡತಿಯ ನಡತೆ ಸರಿಯಿರಲಿಲ್ಲ ಬೇರೊಬ್ಬನ ಸ್ನೇಹವಿತ್ತು. ಅದರಿಂದಾಗಿ ನಾನು ಬೇರೆಯಾಗುತ್ತಿದ್ದೇನೆಂದು ಜನರಿಗೆ ನಂಬಿಸುವ ಮಾತುಗಳಿಂದ ಕತೆಕಟ್ಟಿದ.

ಎರಡನೆಯವಳು ಇದೇ ಪರಿಸ್ಥಿತಿಯಿಂದ ಇದ್ದಳು. ಆದರೂ ಆಕೆಗೆ ಮಗಳೊಬ್ಬಳು ಹುಟ್ಟಿದಳು. ಆದರೂ ಈತ ಬದಲಾಗಲೇ ಇಲ್ಲ. ಅನುಮಾನ ಹಾಗೂ ವಿಕೃತ ಮನಸ್ಸಿನ, ವಿಕೃತ ಯೋಜನೆಗಳ ಈತ ಆಕೆ ಮತ್ತೊಮ್ಮೆ ಗರ್ಭಿಣಿಯಾದಾಗ ಅಸಡ್ಡೆ ಮಾಡತೊಡಗಿದ. ಅವಳು ನೋವುಗಳನ್ನು ಅನುಭವಿಸಿ ಸಾಕಷ್ಟು ನೊಂದು ಬೆಂದು ಬದುಕೆ ಬೇಡಾ ಎನ್ನುವ ಸ್ಥಿತಿ ಮುಟ್ಟುತ್ತಿದ್ದಂತೆ, ತಿಂಗಳು ತುಂಬಿದ ಬಸುರಿ, ಹೆರಿಗೆ ಸಮಯದಲ್ಲಿ ಮಗುವಿನ ಜೊತೆ ತಾನು ಸಾವಪ್ಪಿದಳು. ಈತ ಕಣ್ಣೀರು ಸುರಿಸಿದ. ಮೂರು ನಾಲ್ಕು ವರ್ಷ ಮತ್ತೆ ಮದುವೆ ಆಗದೆ ಓಡಾಡಿಕೊಂಡಿದ್ದು, ಮಗಳನ್ನು ಅಜ್ಜಿ ಮನೆಗೆ ಕಳಿಸಿಬಿಟ್ಟಿದ್ದ. ಮಗಳನ್ನು ಕಳೆದುಕೊಂಡ ಅವರು ಈ ಮಗುವನ್ನು ತಾವೇ ಸಾಕತೊಡಗಿದರು.

ಆಗಲೂ ಈತನ ಗೂಸೂಂಬಿ ಬಣ್ಣ ಬಯಲಾಗಲೇ ಇಲ್ಲ. ಇವಳಿಗಾಗಿ ಗಂಡು ಹುಡುಕುತ್ತಿದ್ದವರಿಗೆ ಯಾರೋ ಹೇಳಿದರು. ಹೀಗೊಬ್ಬ ವರನಿದ್ದಾನೆ ಚಿಕ್ಕ ವ್ಯಾಪಾರ ಮಾಡಿಕೊಂಡು ಚಿಕ್ಕ ಮನೆಯಲ್ಲಿ ವಾಸಿಸುತ್ತಾ ಒಂಟಿಯಾಗಿದ್ದಾನೆ. ಇವನಿಗೆ ಯಾರೂ ಇಲ್ಲ, ಮೊದಲು ಮದುವೆ ಅಗಿ ಹೆಂಡತಿ ತೀರಿಕೊಂಡಿದ್ದಾಳೆ. ಹುಡುಗ ಒಳ್ಳೆಯವನು ನಿಮ್ಮ ಹುಡುಗಿಯನ್ನು ಆತನಿಗೆ ಕೊಡಬಹುದು ಎಂದವರು ಸೂಚಿಸಿದಾಗ, ಇವರು ಹೋದರು ಆತನ ಮನೆ, ಅಂಗಡಿ, ಸುತ್ತಮುತ್ತಲಿನ ಪರಿಸರ, ಎಲ್ಲವನ್ನು ವೀಕ್ಷಿಸಿ ಮಾತನಾಡಿದಾಗ ಈತನ ಒಳಗುಟ್ಟನ್ನು ಅರಿತವರು ಯಾರು ನೈಜ ಸ್ವರೂಪ ತಿಳಿಸಲಿಲ್ಲ. ಇವನ ಒಳ್ಳೆಯ ಮುಖದ ಹಿಂದಿನ ಕ್ರೌರ್ಯವನ್ನು ಮರೆತು ಬದಲಾಗಿರಬಹುದು ಎನ್ನುವ ಭಾವನೆಯು ಸುತ್ತಮುತ್ತಲಿದ್ದವರಿಗೆಲ್ಲ ಇದ್ದಿದ್ದರಿಂದ ಈತನ ಶೀತಲತೆಯ ಕ್ರೌರ ಅರಿವಾಗಲಿಲ್ಲ. ಇವನಿಗೆ ವರದಕ್ಷಿಣೆ ಸಲ್ಲಿಸಿ ಮದುವೆ ಮುಗಿಸಿದರು.

ಈತ ತನ್ನ ಬುದ್ಧಿಯನ್ನು ಬಿಡಲೇ ಇಲ್ಲ. ಹೆಂಡತಿಗೆ ಯಾವ ಬೆಲೆಯೂ ಇಲ್ಲ. ಕೆಲಸ ಮಾಡಲು, ಮನೆ ಕಾಯಲು, ಹಾಗೂ ರಾತ್ರಿ ಮಲಗಲು ಮಾತ್ರ ಹೆಂಡತಿಯ

ಅವಶ್ಯಕತೆ, ಅದೂ ಹೆಂಡತಿಯಾಗಿ ಅಲ್ಲ ತಾನು ತಾಳಿ ಕಟ್ಟಿದವನು, ಊಟ ಹಾಕುವವನು, ಇದಕ್ಕಿಂತ ಹೆಚ್ಚಿಗೆ ಏನೂ ಬೇಕು ಎಂದೂ

ತನಗಾಗುತ್ತಿರುವ ಮಾನಸಿಕ ಹಿಂಸೆ, ಸದಾವಟ ಗುಟ್ಟುತ್ತಾ ಅವಳ ತವರು ಮನೆಯವರನ್ನು ಹಳಿಯುತ್ತಾ ಅಂಗಡಿಗೆ ಬೀಗ ಹಾಕಿ, ತನಗಿಷ್ಟವಾದ ಕಡೆ ಅಲೆದಾಡುತ್ತ ಇವಳ ಬಗ್ಗೆ ಹಗುರವಾದ ಮಾತನಾಡುತ್ತಾ ತನ್ನ ಸ್ನೇಹಿತರ ಜೊತೆ ಎಲೆ ಅಡಿಕೆ ಹಾಕುತ್ತಾ ಕುಳಿತಿರುತ್ತಾನೆ. ಈತನಿಗೆ ಹೆಂಡತಿಯ ಕಡೆಯವರು ಯಾರು ಬರಬಾರದು, ಪತ್ರ ಹಾಕಬಾರದು, ಆಗೆಲ್ಲ ಅವಳಿಗೆ ಸಾಕಷ್ಟು ಅವಮಾನ ಮಾಡಿದ್ದಾನೆ. ಇದರಿಂದಾಗಿ, ಒಮ್ಮೆ ಈತನ ಕಾಟ ತಾಳಲಾರದೇ ಇವಳು ಹೋಗಿ ತವರು ಮನೆಯಲ್ಲಿ ಅಳಲನ್ನು ತೋಡಿಕೊಂಡಾಗ ಅವರು ಬಂದು ಆತನಿಗೆ ಬುದ್ಧಿ ಹೇಳಿ, ಇವಳನ್ನು ಬಿಟ್ಟು ಹೋಗಿದ್ದರು.

ಇವಳು ಓದಿದ ಓದು ಜೀವನ ನಡೆಸಲಾರದು. ಇರುವ ಬುದ್ಧಿವಂತಿಕೆಗೆ ಧೈರ್ಯ ಸಾಲದು. ಈಕೆ ಧೈರ್ಯ ಮಾಡಿದರೆ, ಮನೆ ಬಿಟ್ಟು ಹೋಗು ಇನ್ನು ಬರಬೇಡಾ ಎನ್ನುವ ಮಾತು ಈಕೆಯನ್ನು ಹೆದರಿಸುತ್ತದೆ.

ಇತ್ತ ತವರು ಮನೆಯವರ ಬಲವಿಲ್ಲ. ಇದ್ದರೂ ತಾನು ಒಂಟಿಯಾಗಿ, ಬಾಳುವ ಧೈರ್ಯ ಇಲ್ಲ. ಗಂಡ ಬಿಟ್ಟವಳು ಎಂಬ ಅಪನಿಂದೆಯ ಮಾತುಗಳು ಅಥವಾ ಹೊರಬಂದರೇ, ಹಾಗೂ ಕಾನೂನಿನ ನೆರವನ್ನು ಪಡೆದರೂ, ಈಗಾಗಲೇ ಮಧ್ಯಮ ವಯಸ್ಸನ್ನು ತಲುಪುತ್ತಿರುವ ತನಗೆ ಆಸರೆ ಯಾರು ? ಕಳೆದು ಹೋಗುವ "ಜೀವನ"ವನ್ನು ತುಂಬಿಸಿಕೊಡುವವರು ಯಾರು ? ಏನೆಲ್ಲಾ ಪ್ರಶ್ನೆಗಳು ಇವಳನ್ನು ಕಾಡುತ್ತಿವೆ, ದಿನಾಲು ಕಾಡುತ್ತಲೇ ಇರುತ್ತವೆ.

ದಿನ ನಿತ್ಯದ ಇದೇ ರೀತಿಯ ನಡವಳಿಕೆ ಅವಳಿಗೆ ಮರಗಟ್ಟಿಸಿ ಸಂವೇದನೆಯನ್ನೇ ಮರೆಸಿಬಿಟ್ಟಿದೆ. ತನ್ನ ಮನಸ್ಸು, ವ್ಯಕ್ತಿತ್ವ, ಎಲ್ಲ ಖಾಲಿಯಾದರೂ, ಬದುಕೇ ಶೂನ್ಯ ಅನ್ನಿಸಿದರೂ, ಆಕೆ ತನ್ನ ಆ ಪಂಜರದಿಂದ ಹೊರಬರಲು, ತಾಳಿಯನ್ನು ಅವನಿಗೆ ಕೊಟ್ಟು ಬರಲಾಗುತ್ತಿಲ್ಲ. ತಾಳಿ ಬಂಧನ, ಜೀವನದ ಅಸಹಾಯಕತೆಯ ಸಮಾಜದ ಬಂಧನ, ಜೀವಮಾನವ ತುಂಬಲಾರದ ಒಂಟೀತನದ ಹೋರಾಟ, ದುರ್ಬಲ ಆರ್ಥಿಕ, ಸಾಮಾಜಿಕ, ಸ್ಥಿತಿಯನ್ನು ದಾಟಲಾರದ ನಿಶ್ಯಕ್ತ ನಡಿಗೆಗೆ ಸ್ಫೂರ್ತಿ, ಧೈರ್ಯ, ಕೆಚ್ಚು, ಆತ್ಮೀಯತೆ, ಸ್ವಾಭಿಮಾನ, ಹುಟ್ಟುತ್ತಿಲ್ಲ. ಇದೇ ದಿನದ ಗೋಳಾಗಿ ಹಾಡಾಗಿ ಬದುಕು ಸವೆಯುತ್ತಿದೆ.

ಏನೆಲ್ಲ ಯೋಚನೆಗಳು ನನ್ನ ಕಾಡುತ್ತವೆ. ಆಗ ನಾ ಕೇವಲ ಸ್ಪಂದಿಸಲಾರದೆ, ನೋವಿನೊಳಗುಣ ಮುದುಕಿಕೊಳ್ಳುತ್ತೇನೆ, ಎಲ್ಲಿಂದ ಎಲ್ಲಿಗೆ ಹೋದರೂ, ಬಾವಿಯಲ್ಲಿ ಬಿದ್ದಿರುವ ನೀರಿನ ಕೊಡವನ್ನು ಪಾತಾಳಗರಡಿ ಹಾಕಿ ತೆಗೆದಷ್ಟು ಸುಲಭವಾಗಿ, ಸಮಸ್ಯೆಯ ಆಳ ಸುಲಭವಾಗದೇ ತೊಡಕಾಗುತ್ತದೆ, ಗೋಜಲಾಗುತ್ತದೆ ತಮ್ಮ ಸೋಮ ಜ್ಯೋತಿರ್ಗಮಯ ತತ್ವದ ಪರದೆಗೆ ಹೆಣಕೆ ಹಾಕತೊಡಗುತ್ತೇನೆ. ಕತ್ತಲನ್ನು ಸೀಳಿಕೊಂಡು ಚಂದ್ರನ ಬೆಳಕು ಗೋಚರಿಸಿದಂತೆ ಎದ್ದು ನಿಲ್ಲುತ್ತೇನೆ.

ಓದುಗರ ಗಮನಕ್ಕೆ

- ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಸಂಚಿಕೆಯನ್ನು ಒಟ್ಟಾಗಿ ವಿಶೇಷ ಸಂಚಿಕೆಯಾಗಿ ಮಾರ್ಚ್‌ನಲ್ಲಿ ಹೊರತರುತ್ತಿರುವುದರಿಂದ ಫೆಬ್ರವರಿಯ ಸಂಚಿಕೆ ಪ್ರಕಟವಾಗುವುದಿಲ್ಲ.
- ['ಮಾನಸ'ದ ಬಗ್ಗೆ ಹಿತಾಸಕ್ತಿಯುಳ್ಳವರು, 1993ನೆಯ ವರ್ಷದ ಮಾನಸ'ದ ಈ 'ಅವಲೋಕನ'ದ ಬಗ್ಗೆ ಪ್ರತಿಕ್ರಿಯೆ/ಸೂಚನೆ/ಸಲಹೆಗಳನ್ನು ನೀಡಿವಲ್ಲಿ ಸಂಪಾದಕ ಮಂಡಳಿಯು 1994ನೇ ವರ್ಷದ ಕಾರ್ಯ-ಚಟುವಟಿಕೆಗಳಿಗೆ ನೆರವು ನೀಡಿದಂತಾಗುತ್ತದೆ].

ಪುರುಷ ಪ್ರಾಧಾನ್ಯತೆಗೆ ಮಹಿಳೆಯರೆಷ್ಟು ಕಾರಣ

ಹೇಮಲತಾ ಎಚ್. ಎಮ್.

ನಮ್ಮ ಸಮಾಜದ ಪುರುಷ ಪ್ರಾಧಾನ್ಯತೆಗೆ ಅಥವಾ ಅವರು ನಡೆಸುವ ದಬ್ಬಾಳಿಕೆಗೆ ಮಹಿಳೆಯರು ಸ್ವಲ್ಪ ಮಟ್ಟಿಗೆ ಕಾರಣವಾಗಿದ್ದಾರೆ. ಅವರು ಅನಗತ್ಯವಾಗಿ ಪುರುಷರಿಗೆ ಪ್ರಾಮುಖ್ಯತೆ ಕೊಡುತ್ತಾರೆ. ಅದರಲ್ಲೂ ಮದುವೆ ಆದಾಗ ಗಂಡನ ಬಲವನ್ನು ಗಳಿಸುವುದೇ ತನ್ನ ಜೀವನದ ಮುಖ್ಯ ಗುರಿಯೇನೋ ಅನ್ನುವ ಹಾಗೆ ತನ್ನನ್ನು ಸಂಪೂರ್ಣ ಅರ್ಪಿಸಿಕೊಂಡು ಅವನು ಹೇಳಿದ ಹಾಗೆ ಕೇಳಲು ಪ್ರಾರಂಭಿಸುತ್ತಾಳೆ ಈ ಹೆಣ್ಣು. ಅಂದರೆ ಅವಳು ಅವನನ್ನು ವಿರೋಧಿಸಬೇಕು ಅಂತ ಅರ್ಥ ಅಲ್ಲ. ಅವನನ್ನು ಅರ್ಥಮಾಡಿಕೊಂಡು ಹೊಂದಿಕೊಂಡು ಹೋದರೂ ತನ್ನ ತನವನ್ನು ಬಿಡಬಾರದು.

ನಾನು ಎಷ್ಟೋ ಕುಟುಂಬಗಳನ್ನು ಹತ್ತಿರದಿಂದ ದೂರದಿಂದ ನೋಡಿದ್ದೇನೆ. ನನ್ನ ಒಂದು ಪ್ರಶ್ನೆ ಇನ್ನೂ ಪ್ರಶ್ನೆಯಾಗೆ ಉಳಿದಿದೆ. ನಿಜವಾಗಿಯೂ ಕುಟುಂಬದಲ್ಲಿ ಪುರುಷ ಪ್ರಾಧಾನ್ಯತೆ ಇದೆಯಾ, ಸ್ತ್ರೀ ಪ್ರಾಧಾನ್ಯತೆ ಇದೆಯೇ ಅಥವಾ ಇಬ್ಬರದೂ ಸಮಾನಾಗಿದೆಯೇ ? ಒಂದು ಕುಟುಂಬದಲ್ಲಿ ಗಂಡ ಹೆಂಡತಿ ಮಕ್ಕಳು ಸಂತೋಷವಾಗಿರುವುದನ್ನು ನೋಡಿದಾಗ ಇವರು ಸಂತೋಷದಿಂದ ಇರುವುದರಿಂಧ ಇಬ್ಬರಲ್ಲೂ ಸಾಮರಸ್ಯ ಇದೆ. ಯಾವುದೇ ಪ್ರಾಧಾನ್ಯತೆಯಾಗಲಿ, ದಬ್ಬಾಳಿಕೆಯಾಗಲಿ ಇಲ್ಲ ಅಂತ ಅನ್ನಿಸುತ್ತೆ. ಆದರೆ ಕ್ರಮೇಣ ಗಮನಿಸುತ್ತಾ ಹೋದ ಹಾಗೆ ಮನೆಯ ಹೆಚ್ಚಿನ ವಿಷಯಗಳಲ್ಲಿ ಉದಾ–ಹಣದ ಬಗ್ಗೆ, ಹೊರಗೆ ಊರಿಗೆ ಹೋಗುವುದರ ಬಗ್ಗೆ ಅಥವಾ ವಸ್ತುಗಳನ್ನು ತರುವ ವಿಷಯಗಳಲ್ಲಿ ಗಂಡ ಹೇಳಿದ್ದೆ ನಡೆಯುತ್ತೆ. ಹೆಂಡತಿ ನಿರ್ಧಾರ ತೆಗೆದುಕೊಳ್ಳುವುದಿಲ್ಲ ಅಂತಲ್ಲ. ಆದರೆ ಹೆಚ್ಚಿನ ಪ್ರಮಾಣದಲ್ಲಿ ಗಂಡನದೇ ಅಂತಿಮ ನಿರ್ಧಾರವಾಗಿರುತ್ತೆ. ಸ್ತ್ರೀಯರಿಗೆ ಇದರ ಬಗ್ಗೆ ಗೊತ್ತಿರುತ್ತೋ ಇಲ್ಲವೋ ಅಥವಾ ಗೊತ್ತಿದ್ದರೂ ಸುಮ್ಮನಾಗುತ್ತಾರೋ ಗೊತ್ತಿಲ್ಲ. ಅಂತೂ ಎಲ್ಲದಕ್ಕೂ ಒಪ್ಪಿಕೊಂಡು ಸಂತೋಷದಿಂದ ಇರುತ್ತಾರೆ.

ನಾನು ಎಷ್ಟೋ ಸಾರಿ ಗಮನಿಸಿದ್ದೇನೆ ಗಂಡ ಹೆಂಡತಿ ಇಬ್ಬರೂ ದುಡಿಯುತ್ತಿರುತ್ತಾರೆ. ಅವಳು ಏನಾದರೂ ತೆಗೆದುಕೊಳ್ಳಬೇಕಾದರೆ ಗಂಡನ ಬಳಿ ಕೇಳುತ್ತಾಳೆ. ತನಗೆ ಇಷ್ಟ ಬಂದ ರೀತಿಯಲ್ಲಿ ಖರ್ಚು ಮಾಡುವುದಿಲ್ಲ ಇದನ್ನು ತೊಗೊಳ್ಳೇನ್ರೀ, ಅದನ್ನು ತಂದುಕೊಡ್ರಿ ಎಂದು ಕೇಳುತ್ತಾಳೆ. ಇದನ್ನು ಸಂತೋಷದಿಂದಲೇ ಮಾಡಿಕೊಂಡು ಎಲ್ಲೂ ಪ್ರಶ್ನಿಸಿಕೊಳ್ಳುವುದೇ ಇಲ್ಲವಲ್ಲ ಎಂದು ನನಗೆ ಆಶ್ಚರ್ಯ. ಅವಳಿಗೆ ಎಲ್ಲಿಗಾದರೂ ಹೋಗಬೇಕಾದರೆ ಹೋಗಿ ಬರಲೇನ್ರಿ' ಎಂದು ಕೇಳುತ್ತಾಳೆ ಆದರೆ ಗಂಡ ನಾನು ಹೋಗುತ್ತಾ ಇದ್ದೇನೆ ಎಂದು ಹೇಳುತ್ತಾನೆ ಇಲ್ಲ ಹೇಳದೇ ಇರಬಹುದು. ಈ ರೀತಿ ನಡೆಯುವುದು ಸಾಮಾನ್ಯ ವಿಷಯವಾಗಿದೆ. ನನಗನ್ನಿಸುವುದು ಹೆಂಗಸರು ಮಾತ್ರ ಯಾಕೆ ಎಲ್ಲದಕ್ಕೂ ಅನುಮತಿ ಪಡೆಯಬೇಕು ಅವರಿಗೇನು ವಿವೇಚನೆ ಇಲ್ಲವಾ ಏನು ಮಾಡಬೇಕು ಎಲ್ಲಿಗೆ ಹೋಗಬೇಕು ಏನು ತರಬೇಕು ಎಂಬ ಪ್ರಜ್ಞೆ ಇಲ್ಲವ ? ಗಂಡ ಇಲ್ಲದೇ ಹೋದರೆ ಮನೆಯ ಎಲ್ಲಿ ಜವಾಬ್ದಾರಿಯನ್ನು ಸಮರ್ಥವಾಗಿ ನಡೆಸುವ ಸ್ತ್ರೀಗೆ ಗಂಡ ಇದ್ದಾಗ ಮಾಡುವುದಕ್ಕೆ ಆಗುವುದಿಲ್ಲವ ? ಖಂಡಿತ ಮಾಡುತ್ತಾಳೆ. ಆದರೆ ಅವಳಿಗೆ ಸ್ವಾತಂತ್ರ್ಯ ಅವಕಾಶ ಸಿಗಬೇಕು ಅಷ್ಟೆ. ಸಿಗುವುದಕ್ಕಿಂತ ಅವಳಾಗೆ ಪಡೆದುಕೊಳ್ಳಬೇಕು.

ಕೆಲವು ಹೆಂಗಸರ ಭಾವನೆ ಹೇಗಿದೆ ಅಂದರೆ ಗಂಡಸರು ಹೇಳಿದ ಹಾಗೆ ಕೇಳುವುದರಿಂದ ನಮಗೆ ಲಾಭವಾಗುವುದಾದರೆ (ಆರಾಮವಾಗಿರಬಹುದು risk ಇರುವುದಿಲ್ಲ ಯಾವುದೇ ಜವಬ್ದಾರಿ ಇರುವುದಿಲ್ಲ) ಏಕೆ ಕೇಳಬಾರದು ಅಥವಾ ಸಣ್ಣ ಸಣ್ಣ ವಿಷಯಕ್ಕೆ ಪ್ರಶ್ನಿಸಿಕೊಂಡು ಯಾಕೆ ನೆಮ್ಮದಿನ, ಸಂಸಾರನ ಹಾಳುಮಾಡಿಕೊಳ್ಳುವುದು ಎಂದು ಹೊಂದಿಕೊಂಡು ಹೋಗುತ್ತಾರೆ. ಇದೆ ಮುಂದೆ ಗಂಡಸರು ತಮ್ಮ ಮೇಲೆ ಪ್ರಾಧಾನ್ಯತೆ ತೋರಲು ದಬ್ಬಾಳಿಕೆ ಮಾಡಲು ಕಾರಣವಾಗುತ್ತೆ ಎಂಬುದನ್ನು ಸ್ತ್ರೀಯರು ಅರಿಯುವುದಿಲ್ಲ.

ಇನ್ನು ಕೆಲವರು ಆರಾಮವಾಗಿರಬೇಕೆಂದು ಕಷ್ಟಪಡಲು risk ತೆಗೆದುಕೊಳ್ಳಲು ಇಷ್ಟಪಡದೆ ಎಲ್ಲಾ

ಜವಾಬ್ದಾರಿಯನ್ನು ಗಂಡಸರ ಮೇಲೆ ಹಾಕಿ ತಾವು ಕೇವಲ ಮನೆಕೆಲಸ ಮಾಡಿಕೊಂಡು ಸುಮ್ಮನಿದ್ದುಬಿಡುತ್ತಾರೆ. ಇದರಿಂದ ಗಂಡಸರು ಎಲ್ಲಾ ಜವಾಬ್ದಾರಿ ತಮ್ಮ ಮೇಲೆ ಇರುವುದರಿಂದ ತಾವೇನೋ Great ಅಂತಲೋ ಮನೆ ಯಜಮಾನನಾಗಲು ತನಗೊಬ್ಬನಿಗೆ ಯೋಗ್ಯತೆ ಇದೆ, ಹೆಂಗಸರಿಗೆ ಏನು ಮಾಡಲಾಗುವುದಿಲ್ಲ, ಅವರು ನಾವು ಹೇಳಿದ ಹಾಗೆ ಕೇಳಿಕೊಂಡು ಮನೆಯಲ್ಲಿರಬೇಕು ಅನ್ನುವ ಭಾವನೆ ಬಂದುಬಿಡುತ್ತೆ. ಕೆಲವು ಸಮಯ ಮಹಿಳೆಯರು ತಮ್ಮ ignorance, ಅಸಹಾಯಕತೆ ಮುಗ್ಧತೆ ತೋರಿಸಿಕೊಂಡು ಗಂಡಸರ ಮೆಚ್ಚುಗೆ ಗಳಿಸಲು ಪ್ರಯತ್ನಿಸುವುದು ಕೂಡ ಪುರುಷರ dominationಗೆ ಕಾರಣವಾಗುತ್ತೆ. ಮೊದಲೇ ಗಂಡಸರು ತಮ್ಮ ಹೆಂಡತಿಯರು ಮುಗ್ಧರಾಗಿರಬೇಕು, ಸೌಂದರ್ಯವತಿಯರಾಗಿರಬೇಕು, ignorants ಅಸಹಾಯಕರಾಗಿರಬೇಕು ಎಂದು ಇಷ್ಟಪಡುತ್ತಾರೆ (ನಾನೇ ಗಮನಿಸಿದ ಮಟ್ಟಿಗೆ). ಹಾಗಿರುವಾಗ ಈ ಸ್ತ್ರೀಯರು ಗಂಡನಿಗೋಸ್ಕರವೇ ಸೌಂದರ್ಯ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವುದು, ಒಡವೆ ಸೀರೆಗಳಿಗೆ ಅತಿಆಸೆ ತೋರಿಸುವುದು. ತಮ್ಮ ಮುಗ್ಧತೆ ignorance ಅಸಹಾಯಕತೆಯನ್ನು ತೋರಿಸಿಕೊಳ್ಳುತ್ತಾ ಬಂದರೆ ಪುರುಷರು ಇವರನ್ನು dominate ಮಾಡದೆ ಏನು ಮಾಡುತ್ತಾರೆ.

ಒಂದು ಸಣ್ಣ ಉದಾಹರಣೆಗೆ ತೆಗೆದುಕೊಳ್ಳೋಣ. ಗಂಡ ಹೆಂಡತಿ ಇಬ್ಬರು ಕೆಲಸದಲ್ಲಿರುತ್ತಾರೆ. ಇಬ್ಬರ ಹಣವೂ ಬ್ಯಾಂಕಿನಲ್ಲಿರುತ್ತದೆ. ಆದರೆ ಹೆಂಡತಿ ಹಣ ಇಟ್ಟಿರುವ ಬ್ಯಾಂಕ್ ಮನೆಗೆ ಅಥವಾ ಕಛೇರಿಗೆ ದೂರವಿರುತ್ತೆ. ಸ್ವಲ್ಪ ಕಷ್ಟಪಟ್ಟರೆ ಸಮಯ ಮಾಡಿಕೊಂಡರೆ ಅವಳೇ ಹೋಗಿ ಹಣ ತರಬಹುದು. ಆದರೆ ಗಂಡನ ಮೇಲಿನ ನಂಬಿಕೆಯಿಂದಲೋ, ತೊಂದರೆ ಕಡಿಮೆಮಾಡಿಕೊಳ್ಳಲೋ ಅಥವಾ ಗಂಡ ಸುಲಭವಾಗಿ ತರಬಹುದು ಎಂದೋ Chequeಗೆ sign ಮಾಡಿ ಹಣ draw ಮಾಡಿಕೊಂಡು ಬರಲು ಗಂಡನಿಗೆ ಹೇಳುತ್ತಾಳೆ. ಹೀಗೆ ಪ್ರಾರಂಭವಾದದ್ದು ಕಡೆಗೆ ಯಾವ ಸ್ಥಿತಿಗೆ ಬರುತ್ತೆ ಎಂದರೆ ಹಣದ ಹಿಡಿತ ಗಂಡನ ಕೈಗೆ ಹೋಗಿ, ಗಂಡ sign ಮಾಡು ಎಂದಾಗ ಮಾತ್ರ sign ಮಾಡಿ ಅವನಿಗೆ ಯಾವಾಗ ಬೇಕೋ ಅವಾಗ ಮಾತ್ರ ಹಣ ತರುವಂತ ಪರಿಸ್ಥಿತಿ ಬರುತ್ತೆ. ತನಗೆ ಬೇಕೆನಿಸಿದಾಗ ಹಣ ತಂದು ಖರ್ಚು ಮಾಡುವ ಸ್ವಾತಂತ್ರ್ಯ ಕಳೆದುಕೊಂಡು, ಆಕಸ್ಮಾತ್ ತಾನೆ ತಂದರೂ. ಯಾಕೆ ಹಣ ತಂದೆ ಯಾವುದಕ್ಕೆ ಖರ್ಚು ಮಾಡಿದೆ, balance ಯಾಕೆ ಇಷ್ಟು ಕಡಿಮೆಯಾಯಿತು ಎನ್ನುವ ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗುತ್ತದೆ. ಹೀಗೆ ಹೆಂಗಸರು ಎಲ್ಲೋ ಒಂದು ಕಡೆ ಸಣ್ಣ ವಿಷಯದಲ್ಲಿ ತಮ್ಮ ದುರ್ಬಲತೆ, ಅಸಹಾಯಕತೆ ಮುಗ್ಧತೆಯನ್ನು ತೋರಿಸಿಕೊಂಡು, ಕಡೆಗೆ ಸಂಪೂರ್ಣವಾಗಿ ಪುರುಷರ ಹಿಡಿತಕ್ಕೆ ಒಳಪಡುತ್ತಾರೆ.

ಗಂಡಂದಿರ ತಪ್ಪುಗಳನ್ನು ಮುಚ್ಚಿ ಹಾಕಿಕೊಂಡು ಅವರಲ್ಲಿ ಇಲ್ಲದ ಒಳ್ಳೆ ಗುಣಗಳನ್ನ ಹೇಳಿಕೊಂಡು, ಅಥವಾ ಅಲ್ಪ ಸ್ವಲ್ಪ ಇದ್ದರೆ ಅದನ್ನೆ ಉತ್ಪ್ರೇಕ್ಷೆ ಮಾಡಿಕೊಂಡು ಅವರೇನೋ ಭಾರಿ ಬುದ್ಧಿವಂತರು, ದಯಾವಂತರು, ಅಥವಾ great ಅನ್ನುವ ರೀತಿಯಲ್ಲಿ ಹೊಗಳಿಕೊಳ್ಳುವುದು ಕೆಲವು ಹೆಂಗಸರ ಸ್ವಭಾವ. ನಾನು ಕೆಲವರು ಹೇಳುವುದನ್ನು ಕೇಳಿದ್ದೇನೆ. "ನಮ್ಮೆ ಜಮಾನರಿಗೆ ಈ ತಿಂಡಿನೇ ಆಗಬೇಕು, ಊಟ ಈ ರೀತೀನೇ ಇರಬೇಕು ಇಲ್ಲದಿದ್ದರೆ ಊಟನೇ ಮಾಡಲ್ಲ. ನಾನು ಅವರಿಗೆ ಇಷ್ಟವಾಗುವ ಹಾಗೆ dress ಮಾಡಿಕೊಳ್ಳಬೇಕು. ನನ್ನನ್ನ ಒಂದು ದಿನ ಬಿಟ್ಟಿರಲು ಇಷ್ಟಪಡುವುದಿಲ್ಲ, ಅದಕ್ಕೆ ನಾನು ಎಲ್ಲೂ ಹೋಗಲ್ಲಾ, ಅವರಿಗೆ ತುಂಬ ಕೋಪ, ಸಿಟ್ಟಿನಲ್ಲಿ ಏನು ಮಾಡುತ್ತಾರೋ ಗೊತ್ತಾಗಲ್ಲ (ಗಂಡಸರಿಗೊಬ್ಬರಿಗೇನಾ ಸಿಟ್ಟು ಮಾಡಲು ಬರುವುದು, ಹೆಂಗಸರಿಗೆ ಸಿಟ್ಟು ಬರುವುದಿಲ್ಲವಾ) ಅವರಿಗೆ ಅದು ಇಷ್ಟ ಇದು ಇಷ್ಟ ಎಂದು ಹೇಳಿಕೊಳ್ಳುವುದರಲ್ಲೇ ತೃಪ್ತಿ ಪಡುತ್ತಾರೆ. ಅವರ ಈ ನಡವಳಿಕೆಯೇ ಅವರು ತಮ್ಮ ಮೇಲೆ ತೋರುವ domination ಎಂದು ಸ್ತ್ರೀಯರಿಗೆ ತಿಳಿಯುತ್ತೋ ಇಲ್ಲವೋ ಗೊತ್ತಿಲ್ಲ.

ಇನ್ನೊಂದು ವಿಷಯವೆಂದರೆ ನಾನು ಎಷ್ಟೋ ಮನೆಗಳಲ್ಲಿ picture ಗಳಲ್ಲಿ ಕಥೆ ಪುಸ್ತಕಗಳಲ್ಲಿ ಕೇಳಿರುವ ಕೇಳಿರುವ ಹಾಗೆ ಒಂದು ಮಾತಿದೆ 'ಹೆಂಡತಿ ಗಂಡನ ಒಂದು ಮಾತನ್ನ ಕೇಳಿದರೆ, ಅವಳ ಹತ್ತು ಮಾತುಗಳನ್ನು ಗಂಡ ಕೇಳುತ್ತಾನೆ' ಎಂದು ಇದು ನಿಜವೋ ಸುಳ್ಳೋ ಗೊತ್ತಿಲ್ಲ. ನಿಜವಾದರೆ ಇದರ ಪರಿಣಾಮ ಕುಟುಂಬದ ಮೇಲೆ ಸಮಾಜದ ಮೇಲೆ ಯಾವ ರೀತಿ ಆಗಿರಬೇಕಾಗಿತ್ತು, ಆ ರೀತಿ ಆಗಿದೆಯೇ ? ಈಗ ನಮ್ಮ ಸಮಾಜದಲ್ಲಿರುವ ಪುರುಷ ಪ್ರಾಧಾನ್ಯತೆ ಇರುತ್ತಿತ್ತಾ ಎಂಬ ಪ್ರಶ್ನೆ ಉಂಟಾಗುತ್ತದೆ. ಅಥವಾ ನಿಜವಾದರೂ,

ಪ್ಲಿಂಗಸರು ಹೇಳುವ ಹತ್ತು ಮಾತುಗಳಿಗಿಂತಲೂ ಗಂಡಸರ ಒಂದು ಮಾತು ಹೆಚ್ಚು ಪ್ರಭಾವಶಾಲಿಯಾಗಿರುತ್ತೆ ಅನ್ನಿಸುತ್ತದೆ.

ಕುಟುಂಬದ ಅಜ್ಜ ಅಜ್ಜಿ ತಂದೆ ತಾಯಿಯರ ನಡವಳಿಕೆಗಳು ಮಕ್ಕಳ ಮೇಲೆ ಪ್ರಭಾವ ಬೀರಿ, ಹೆಣ್ಣು ಮಗುವಾದರೆ, ತಾನು ಅಪ್ಪ ಹೇಳಿದ ಹಾಗೆ ಕೇಳಬೇಕು ದೊಡ್ಡವಳಾದ ಮೇಲೆ ಗಂಡ ಹೇಳಿದ ಹಾಗೆ ಕೇಳಬೇಕು ಅನ್ನುವ ಭಾವನೆ ಬೆಳೆದರೆ, ಗಂಡು ಮಗುವಿನಲ್ಲಿ ಇದಕ್ಕೆ ವಿರುದ್ಧವಾದ ಭಾವನೆ ಬೆಳೆಯುತ್ತದೆ.

ಒಟ್ಟಿನಲ್ಲಿ ಮಹಿಳೆಯರು ತಮ್ಮ ದೌರ್ಬಲ್ಯ, ಅಸಹಾಯಕತೆ,ಅತಿ ಆಸೆ, ಮುಗ್ಧತೆ, ignoranceಗಳನ್ನ ಬಿಟ್ಟು, ಹೆಂಡತಿ ಗಂಡನನ್ನೇ ಅವಲಂಬಿಸಿ ಜೀವಿಸಬೇಕಾಗಿಲ್ಲ ಅವನಿಲ್ಲದೆಯೂ ಜೀವಿಸಬಲ್ಲಳೂ ಎಂಬ ಭಾವನೆ. ಪುರುಷರಲ್ಲಿ ಬೆಳೆಯುವಂತೆ ನಡೆದುಕೊಂಡು, ಅವರೊಂದಿಗೆ ಹೊಂದಿಕೊಂಡು ಅರ್ಥಮಾಡಿಕೊಂಡು ನಡೆದರು ತಮ್ಮ ತನವನ್ನು ಸ್ವಾಭಿಮಾನವನ್ನು ಬಿಡದೆ ನಡೆಯುವುದೇ ಆದರೆ ನಮ್ಮ ಸಮಾಜದ ಈ ಪುರುಷ ಪ್ರಾಧಾನ್ಯತೆಯನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಬಹುದು ಅಲ್ಲವಾ ?

ಧರ್ಮ ನಿರಪೇಕ್ಷತೆ/ಕೋಮುವಾದಗಳ ಸಂಬಂಧದಲ್ಲಿ ಇತ್ತೀಚಿಗೆ ಹಲವು ಪುಸ್ತಕಗಳು ಪ್ರಕಟವಾಗಿವೆ. 'ಓರಿಯಂಟ್ ಲಾಂಗ್ ಮನ್' ನವರು ತಮ್ಮ 'ಪ್ರಚಲಿತ ವಿದ್ಯಮಾನ ಮಾಲಿಕೆ'ಯಡಿ ಪ್ರಕಟಿಸಿರುವ "ಖಾಕಿ ಚಡ್ಡಿ ಕೇಸರಿ ಬಾವುಟ" ಮತ್ತು "ನಂಬಿಕೆಯ ಪ್ರಶ್ನೆ" ಮತ್ತು 'ವಿಸ್ತಾರ್' ನವರು ಪ್ರಕಟಿಸಿರುವ "ಹಿಂದೂತ್ವ-ಉದ್ಭವಿಸುತ್ತಿರುವ ಫ್ಯಾಸಿಸಂ ?" ಇವು ಇಲ್ಲಿ ಸೇರುತ್ತವೆ.

"ಹಿಂದೂ ನ್ಯಾಯ" ಕುರಿತ "ಖಾಕಿ ಚಡ್ಡಿ ಕೇಸರಿ ಬಾವುಟ" ಬಾಬರಿ ಮಸೀದಿ ನಾಶವಾಗುವ ಮುಂಚೆ ಸಿದ್ಧಪಡಿಸಿದ್ದು. ಆರೆಸ್ಸೆಸ್ ಮತ್ತು ವಿಎಚ್‌ಪಿಗಳನ್ನು ಕೇಂದ್ರವಾಗಿಟ್ಟುಕೊಂಡು ಇಲ್ಲಿ ವಿಶ್ಲೇಷಿಸಲಾಗಿದೆ. ಕೋಮು ಶಕ್ತಿಗಳು ರೂಪುಗೊಂಡದ್ದನ್ನು ಒಳಗೊಂಡಿರುವ ಚರಿತ್ರೆಯಲ್ಲಿನ ವಿವಿಧ ಘಟನೆಗಳನ್ನು ತೆರೆದಿಡಲು, ಈ ಹಿನ್ನೆಲೆಯಿಂದ ಸಮಕಾಲೀನ ಸ್ಥಿತಿಯ ಮೇಲೆ ಹೆಚ್ಚಿನ ಬೆಳಕು ಚೆಲ್ಲಲು ಇಲ್ಲಿ ಯತ್ನಿಸಲಾಗಿದೆ. ತಪನ್‌ಬಸು, ಪ್ರದೀಪ್ ದತ್ತಾ, ಸುಮಿತ್ ಸರ್ಕಾರ್, ತನೀಕಾಸರ್ಕಾರ್, ಸಂಬುದ್ಧ ಸೇನ್ ಇವರೆಲ್ಲಾ ಮೂಲ ಲೇಖಕರಾಗಿರುವ ಈ ಪುಸ್ತಕವನ್ನು ಮಂಗ್ಳೂರ ವಿಜಯ ಕನ್ನಡಕ್ಕೆ ಅನುವಾದಿಸಿದ್ದಾರೆ.

ನಂಬಿಕೆ ಮತ್ತು ಸಂಪ್ರದಾಯದ ಸೂಕ್ಷ್ಮಸ್ಥಿತಿಯನ್ನು ನಿರಾಕರಿಸುವ ವಿಶಿಷ್ಟ ರೂಪದ ಸಂಕುಚಿತ ಪಂಥಾಭಿಮಾನದ ಧರ್ಮನಿರಪೇಕ್ಷತೆಯನ್ನು 'ನಂಬಿಕೆಯ ಪ್ರಶ್ನೆ' ಚರ್ಚೆಗೊಳಪಡಿಸುತ್ತದೆ. ಧರ್ಮ ನಿರಪೇಕ್ಷಕರು ನಂಬಿಕೆಯನ್ನು ತೀವ್ರವಾಗಿ ಪರಿಗಣಿಸಿ, ಅದನ್ನು ಪುನರ್ ಅವಲೋಕಿಸುವುದು ಅಗತ್ಯ ಎಂದು ಸೂಚಿಸುತ್ತದೆ. ಕನ್ನಡಾನುವಾದಗೊಂಡಿರುವ ಈ ಪುಸ್ತಕದ ಲೇಖಕರು 'ರುಸ್ತುಂ ಭರೂಚ' ಅನುವಾದ ಮುರಳೀಧರ ಖಜಾನ ಅವರದು.

ಇವೆರಡು ಪುಸ್ತಕಗಳ ಪ್ರಕಾಶಕರು :

ಓರಿಯಂಟ್ ಲಾಂಗ್‌ಮನ್ ಲಿಮಿಟೆಡ್

80/1, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-560001

ಪ್ರಕಟಣೆ : 1993

ಬೆಲೆ : ಕ್ರಮವಾಗಿ ರೂ.35/ ಮತ್ತು ರೂ. 30/-

'ಹಿಂದೂತ್ವ'ದ ಕಲ್ಪನೆಯ ಫ್ಯಾಸಿಸ್ಟ್ ಸ್ವರೂಪವನ್ನು ತುಂಬಾ ವಿವರವಾಗಿ ಚಾರಿತ್ರಿಕವಾಗಿ ಹಿಡಿದಿರುವ "ಹಿಂದೂತ್ವ-ಉದ್ಭವಿಸುತ್ತಿರುವ ಫ್ಯಾಸಿಸಂ !" ಅದರ ಇನ್ನೊಂದು ಮುಖವನ್ನೂ ಗುರುತಿಸುವ ಪ್ರಯತ್ನ ಮಾಡುತ್ತದೆ. ಹಾಗೆಯೇ ಧಾರ್ಮಿಕ ಫ್ಯಾಸಿಸಂ ಅನ್ನೂ ಪ್ರತಿರೋಧಿಸುವ ಕೆಲವು ತಂತ್ರಗಳನ್ನೂ ಸಲಹಿಸುತ್ತದೆ. ವಿ. ಗಾಯತ್ರಿ ಕನ್ನಡೀಕರಿಸಿರುವ ಈ ಪುಸ್ತಿಕೆಯ ಲೇಖಕರು ಎಸ್. ಕುಪ್ಪನ್.

ಪ್ರಕಾಶಕರು : **ವಿಸ್ತಾರ್**

45, ದಕಾಸ್ಪ ಚಾಕ, ಒಂದನೇ ಅಡ್ಡರಸ್ತೆ. ಬೆಂಗಳೂರು- 560084

ಮರಳಿಬಾರದ ಗೆಳತಿಗೆ !

ಜಿ. ಗಾಯತ್ರೀ ಕುಂಬ್ರಿಮನೆ

ಗೆಳತೀ, ನೀನಂದು ಕಾಣೆಯಾದಾಗ
ನಿನ್ನ ಬಗ್ಗೆ ಆಡಿಕೊಂಡು ನಕ್ಕಿತ್ತು ಜಗ
ಮಂಗಳವಾರ ಹೊರಟವಳು ಮನೆಯಿಂದ
ಮತ್ತೆ ಬರಲಿಲ್ಲ ಎಂದ
ನಿನ್ನಣ್ಣ ಹರಿಸಿದಾ ಕಣ್ಣೀರು.
ಎಲ್ಲೆಲ್ಲೂ ನಿನ್ನ ಹುಡುಕಿದರು.
ಹಾಳು ಬಾವಿ, ಸಂದಿಗುಂದಿ, ರೈಲ್ವೆ ಹಳಿ,
ಕೊನೆಗೆ ಪಾರ್ಕು ಸಿನಿಮಾ ಮಂದಿರ !
ಮತ್ತೆ ಹೋಟೆಲ್ಲು ರೂಮು !!
ಎಲ್ಲಿಯೂ ಸಿಗದಾಗ ನೀನು
ನಾಲಿಗೆಯ ಚಪಲಕ್ಕಾಗಿ ಆಡಿಕೊಂಡರು
ನಿನ್ನ ಬಗ್ಗೆ ಹತ್ತು-ಹಲವು
ಒಂದು ಬಾಯಿ ನೀ ಪ್ರೀತಿಸಿದಾತನೊಡನೆ
ಓಡಿ ಹೋದೆಯೆಂದರೇ.... ಎರಡನೆಯದು
ನೀನಾಗ ಮೂರು ತಿಂಗಳ ಬಸುರಿ
ಎಂದಂದು ಕಿಸಕ್ಕನೆ ನಕ್ಕಿತು !
ದೂರದ ಸರ್ಕಾರಿ ಆಸ್ಪತ್ರೆಯಲಿ ನೀ
ಹೃದಯ ರೋಗದೊಡನೆ ಬದುಕಿಗಾಗಿ ಹೊರಾಡುತ್ತಿರಲು
"ನಿಮ್ಮಪ್ಪನಿಗೆ ತಿಳಿಸುವೆ" ಎಂದರೂ
ಬೇಡ ಗೆಳತಿ, ಬಡತನದ ಬೇಗೆಯಲಿ
ಬೇಯುತಿಹ ನನ್ನಪ್ಪ ನನ್ನೀ ಸ್ಥಿತಿಯಲಿ
ಕಂಡರೇ....ಎದೆಯೊಡೆದು ಸತ್ತಾರು !
ದಯವಿಟ್ಟು ತಿಳಿಸಬೇಡವೆಂದು
ಪ್ರಮಾಣ ಹಾಕಿಸಿಕೊಂಡೆಯಲ್ಲಾ–?
ಆರ್ಥಿಕವಾಗಿ ನಾನೂ ಬಲವಿರದ ಕಾರಣ
ನೀನಂದು ಮರಳಿಬಾರಲಾಗದ ಕಡೆ
ಹೋಗುವೆಯೆಂದು ತಿಳಿದಿದ್ದರೂ ಸಹ
ಅಸಹಾಯಕಳಾಗಿ ಮೌನವಾಗುಳಿದೆ !
ಆದರಿಂದು ನಿನ್ನ ಬಗ್ಗೆ ಹೊಲಸು
ನಾಲಿಗೆಗಳಾಡುವ ಮಾತ ಕೇಳಿ
ಮೌನವಾಗುಳಿಯಲಾರೆ ಗೆಳತಿ !!

ನನ್ನದೇ ಕೊಠಡಿ

ಅನು : ವೆಂ. **ವನಜ**

ಅವನು ತನ್ನ ತವರಿಗೆ ಹೋಗಿದ್ದಾರೆ
ತನ್ನ ಮಕ್ಕಳೊಂದಿಗೆ.
ಅವನ ಮನೆಯಲ್ಲೀಗ ಮೌನ.

ಅವನ ಪೀಠೋಪಕರಣಗಳ ಧೂಳೊರೆಸಿದಾಗ
ಅವನ ಪುಸ್ತಕಗಳ ಜೋಡಿಸಿದಾಗ
ಸಿಟ್ಟು ಬರುತ್ತದೆ.

ಅವನ ನೆಲ ಗುಡಿಸಿದಾಗ
ಅವನ ಹಾಸಿಗೆ ಹಾಸಿದಾಗ
ಸಿಟ್ಟೇರುತ್ತದೆ.

ಅವನ ಬಟ್ಟೆಗಳ ಒಗೆದಾಗ
ಅವನ ಶರ್ಟುಗಳ ಇಸ್ತ್ರಿ ಮಾಡಿದಾಗ
ಸಿಟ್ಟೇರುತ್ತದೆ.

ಅವನ ಬಾಲ್ಕನಿಯ ತೊಳೆದಾಗ
ಅವನ ಗಿಡಗಳಿಗೆ ನೀರುಣಿಸಿದಾಗ
ಸಿಟ್ಟೇರುತ್ತದೆ.

ಅವನು ನಗುನಗುತ್ತಾ ಹಿಂದಿರುಗುತ್ತಾನೆ.
ಗೆಳೆಯರ ಕರೆತಂದಿರುತ್ತಾನೆ.
'ನಾಲ್ಕು ಚಹ, ಪ್ಲೀಸ್ ರಮ' ಎಂದು ಕೂಗಿ
ಹೇಳುತ್ತಾನೆ.
ಸಿಟ್ಟೇರುತ್ತದೆ.
ಅಡಿಗೆಮನೆಗೆ ಬಂದು ಅವನೆನ್ನುತ್ತಾನೆ:
'ನಿನಗೆ ಸಹಾಯ ಮಾಡಲೆ?'
'ಬೇಡ' ತಟ್ಟನೆನ್ನುತ್ತೇನೆ.
ನಂಜಿನ ನಗೆಬೀರಿ ನನ್ನ ರಾಜ್ಯವ ರಕ್ಷಿಸುತ್ತೇನೆ
ಸಿಟ್ಟು ಉಕ್ಕಿ ಬರುತ್ತದೆ.
'ಇದು ನನ್ನ ಅಡಿಗೆ ಮನೆ. ನಾನೇ ಮಾಡುತ್ತೇನೆ'
ಅವನು ಕೂಡಲೆ ಹಿಂದೆ ಸರಿಯುತ್ತಾನೆ.
ಅವನಿಗೆ ನೋವಾಗಿದೆ—ಏಕೆಂದು ತಿಳಿದಿಲ್ಲ
ನಾನು ನೋಯಿಸಿದ್ದೇನೆ—ಏಕೆಂದು ತಿಳಿದಿಲ್ಲ

ಅವನು ಗೆಳೆಯರೆಡೆಗೆ ತೆರಳುತ್ತಾನೆ
ತನ್ನ ಗಾಯವ ಮರೆಮಾಚುತ್ತಾ.
ನಾನು ನನ್ನ ಕೆಲಸಕ್ಕಾಗಿ
ನನ್ನ ಕೊಠಡಿಗೆ ಮರಳುತ್ತೇನೆ
........ಚಹ ತಯಾರಿಸುತ್ತೇನೆ

ಮೂಲ : **ಹೆಚ್. ಕೆ. ರಜನಿ**
'A room of my own'
('ಮಾನುಷಿ')

ಓದುಗರ ಗಮನಕ್ಕೆ

- 'ಮಾನಸ' ಸಂಪರ್ಕ ವಿಳಾಸದಲ್ಲಿ ಸಂಪೂರ್ಣ ನೆಲೆಯೂರಲು ಇನ್ನೂ ಸ್ವಲ್ಪ ಸಮಯ ಬೇಕಾಗಿರುವುದರಿಂದ, ಅಂತಿಮವಾಗಿ ತಿಳಿಸುವವರೆಗೂ ದಯವಿಟ್ಟು ಎಂ. ಒ. ಚೆಕ್ಕುಗಳನ್ನು ಮತ್ತು ಡ್ರಾಫ್ಟ್‌ಗಳನ್ನು **ಕಾಡುಗೋಡಿಯ** ವಿಳಾಸಕ್ಕೆ ಕಳಿಸಬೇಕೆಂದು ಕೇಳಿಕೊಳ್ಳುತ್ತೇವೆ.

- 'ಮಾನಸ'ವನ್ನು ಸಂಪರ್ಕಿಸಬಯಸುವವರಿಗಾಗಿ ಇನ್ನು ಮುಂದೆ ತಿಂಗಳ ಪ್ರತಿ ಎರಡನೇ ಶನಿವಾರ ಮತ್ತು ಕೊನೆಯ ದಿನದಂದು 'ಸಂಪರ್ಕ ವಿಳಾಸ'ವೆಂದು ಸೂಚಿಸಿರುವ ಕಛೇರಿಯು ಮಧ್ಯಾಹ್ನ 2 ಗಂಟೆಯಿಂದ ಸಂಜೆ 5 ಗಂಟೆಯವರೆಗೂ ತೆರೆದಿರುತ್ತದೆ. 'ಮಾನಸ' ಬಳಗದ ಯಾರಾದರೂ ಅಲ್ಲಿ ಕಾಣಸಿಗುತ್ತೇವೆ. ಈ ದಿನ-ಸಮಯಗಳಲ್ಲಿ ನಿಮಗೆ ಸ್ವಾಗತವಿದೆ.

–ಸಂಪಾದಕೀಯ ಮಂಡಳಿ

REGD NO. KRNA 271

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ

ವಿಳಾಸ :
" ಮಾನಸ "
ಪಂಚಾಯಿತಿ ರಸ್ತೆ,
ಕಾಡುಗೋಡಿ
ಬೆಂಗಳೂರು-560 067